MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com | Yuva Marga | yuva_marga_

# ಯುವ ಮಾರ್ಗ

VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 55 | ಭಾನುವಾರ : 14-12-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 55 | SUNDAY : 14-12-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಸೋನಿಯಾ ಗಾಂಧಿ ಅಂಗಳಕ್ಕೆ ಕರ್ನಾಟಕ ಸಿಎಂ ಕುರ್ಚಿ ಚೆಂಡು



**ಬೆಂಗಳೂರು,ಡಿ.13–** ಸಿಎಂ ಕುರ್ಚಿ ಕದನ ದೆಹಲಿಗೆ ಸ್ಥಳಾಂತರಗೊಳ್ಳಲಿದೆ. ಶತಾಯ ಗತಾಯ ಸಿಎಂ ಪಟ್ಟ ಪಡೆಯಲೇಬೇಕೆಂದು ಡಿಸಿಎಂ ಡಿ.ಕೆ. ಶಿವಕುಮಾರ್ ನಿರಂತರ ಕಸರತ್ತು ನಡೆಸುತ್ತಿದ್ದರೆ, ಪಟ್ಟದ ಮುಂದುವರಿಕೆಗೆ ಸಿಎಂ ಸಿದ್ದರಾಮಯ್ಯ ಪ್ರಯತ್ನ ನಡೆಸುತ್ತಿದ್ದು ಬೆಂಗಳೂರು ಮತ್ತು ಬೆಳಗಾವಿಯಲ್ಲಿ ನಡೆದ ರಾಜಕೀಯ ಮೇಲಾಟಗಳು ಈಗ ಮತ್ತೆ ದೆಹಲಿಗೆ ತಲುಪಿವೆ.

ಸಿಎಂ ಕುರ್ಚಿ ಕದನ ದಿನೇದಿನೇ ತಾರಕಕ್ಕೇರುತ್ತಲೇ ಇದೆ. ಹೈಕಮಾಂಡ್ ಸೂಚನೆಯಂತೆ ಉಪಾಹಾರ ಕೂಟದ ಮೂಲಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್‌ರವರು ನಾಯಕತ್ವ ಬದಲಾವಣೆ ವಿಷಯವನ್ನು ತಣ್ಣಗಾಗಿಸುವಂತೆ ಮಾಡಿದ ಪ್ರಯತ್ನ ಫಲ ಕೊಟ್ಟಂತೆ ಕಾಣುತ್ತಿಲ್ಲ.

ಸಿಎಂ, ಡಿಸಿಎಂ ಬೆಂಬಲಿಗರು ತಮ ನಾಯಕರುಗಳ ಪರವಾಗಿ ಧ್ವನಿ ಎತ್ತುತ್ತಲೇ ಇದ್ದಾರೆ. ಎಐಸಿಸಿ ಅಧ್ಯಕ್ಷರಾದ ಖರ್ಗೆಯವರು ಬೆಂಗಳೂರಿಗೆ ಬಂದು ಈ ಕುರಿತು ಪರಿಸ್ಥಿತಿ ಅವಲೋಕಿಸಿ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆಸಿದರು.

ಸಿಎಂ, ಡಿಸಿಎಂ ಅವರು ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಎಂಬ ಹೇಳಿಕೆ ನೀಡಿದ್ದರು. ಆದರೆ ಅವರ ಆಪ್ತ ಬೆಂಬಲಿಗರು ಯಾಕೋ ಈ ವಿಷಯದಲ್ಲಿ ತಣ್ಣಗಾಗುತ್ತಿಲ್ಲ. ಬೆಂಗಳೂರಿನ ಉಪಾಹಾರ ಕೂಟಗಳು ಮುಗಿದ ಮೇಲೆ ಬೆಳಗಾವಿಯ ಅಧಿವೇಶನ ಸಂದರ್ಭದಲ್ಲಿ ನಡೆದ ಔತಣ ಕೂಟದಲ್ಲಿ ಮತ್ತೆ ನಾಯಕತ್ವದ ವಿಷಯಗಳು ಗರಿಗೆದರಿ ಪರಸ್ಪರ ಶಕ್ತಿ ಪ್ರದರ್ಶನಕ್ಕೆ ಕಾರಣವಾಗಿವೆ.

ಸಿಎಂ ಸಿದ್ದರಾಮಯ್ಯ ಬೆಂಬಲಿಗರು ಸಭೆ ನಡೆಸಿದರೆ ಡಿಕೆಶಿ ಶಿವಕುಮಾರ್‌ರವರ ಬೆಂಬಲಿಗರಾದ 40ಕ್ಕೂ ಹೆಚ್ಚು ಶಾಸಕರು ಔತಣಕೂಟದ ನೆಪದಲ್ಲಿ ಶಕ್ತಿ ಪ್ರದರ್ಶನ ನಡೆಸಿದ್ದಾರೆ.ಬೆಳಗಾವಿಯ ಅಧಿವೇಶನದ ಸಂದರ್ಭದಲ್ಲಿ ಸಿಎಂ ಕುರ್ಚಿ ಕದನ ಕಾವೇರಿದೆ. ನಾಳೆ ದೆಹಲಿಯಲ್ಲಿ ಎಐಸಿಸಿ ವತಿಯಿಂದ ವೋಟ್‌ಚೋರಿ ಆಂದೋಲನ ನಡೆಯುತ್ತಿದ್ದು, ಅಲ್ಲೂ ಕೂಡ ಶಕ್ತಿ ಪ್ರದರ್ಶನ ನಡೆಸಲು ಬೆಂಬಲಿಗರು ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ.

ಸುಮಾರು 100 ಕ್ಕೂ ಹೆಚ್ಚು ಶಾಸಕರು, ವಿಧಾನಪರಿಷತ್ ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ದೆಹಲಿಗೆ ತೆರಳುತ್ತಿದ್ದು, ಹೈಕಮಾಂಡ್ (2ನೇಪುಟಕ್ಕೆ..)

## ದಂಪತಿಗಳನ್ನು ಒಗ್ಗೂಡಿಸಿದ ಲೋಕ ಅದಾಲತ್



ಯುವಮಾರ್ಗ ಸುದ್ದಿ

**ಲಿಂಗಸಗೂರು,ಡಿ.13–** ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರಾಯಚೂರು ತಾಲೂಕು ಕಾನೂನು ಸೇವಾ ಸಮಿತಿ, ಲಿಂಗಸಗೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ರಾಷ್ಟೀಯ ಲೋಕ ಅದಾಲತ್ತನ್ನು ಆಯೋಜಿಸಲಾಗಿದ್ದು ಇದರಲ್ಲಿ ಕೌಟುಂಬಿಕ ಕಲಹದಿಂದ ದೂರಸರಿಯಲು ಇಚ್ಚಿಸಿದ ದಂಪತಿಗಳ ಪರವಾಗಿ ಕೆ.ತಸ್ಲೀಮ ವಕೀಲರು ಮತ್ತು ಬಿ.ಬಸವರಾಜ ವಕೀಲರು ನ್ಯಾಯಾಲಕ್ಕೆ ಬಂದಾಗ ಹಿರಿಯ ಶ್ರೇಣಿ ನ್ಯಾಯಧೀಶರಾದ ಶ್ರೀಮತಿ ಉಂಡಿ ಮಂಜುಳಾ ಶಿವಪ್ಪ ಇವರು ಪ್ರಕರಣವನ್ನು ಕೈಗೆತ್ತಿಕೊಂಡು ದಂಪತಿಗಳಿಗೆ ಜೀವನದ ಬಗ್ಗೆ ತಿಳುವಳಿಕೆ ಹೇಳಿ ದಂಪತಿಗಳನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾದರು ಅದರಂತೆ ಲೋಕ ಅದಾಲತ್ತಿನಲ್ಲಿ ರಾಜಿಯಾಗುವ ಮೂಲಕ ಪರಸ್ಪರ ಹೂವಿನ ಹಾರ ಬದಲಿಸಿಕೊಂಡು ಬೇರೆಯಾಗಬೇಕಿದ್ದ ದಂಪತಿಗಳು ಒಗ್ಗೂಡಿಸಿದರು .

5744ಬಾಕಿ ಪ್ರಕರಣಗಳ ಪೈಕಿ 2266 ಪ್ರಕರಣಗಳು ಲೋಕ ಅದಾಲತ್ತಿನಲ್ಲಿ ರಾಜಿಯಾಗುವ ಮೂಲಕ ಇತ್ಯಾರ್ಥವಾಗಿರುತ್ತವೆ. ಇದರ ಒಟ್ಟು ಮೊತ್ತ ರೂ. 2,37,24,547 (ಎರಡು ಕೋಟಿ ಮೂವತ್ತೇಳು ಲಕ್ಷದ ಇಪ್ಪತ್ತು ನಾಲ್ಕು ಸಾವಿರದ ಐದುನೂರ ನಲವತ್ತೇಳು ರೂಪಾಯಿ ) ಆಗಿದ್ದು , ವಾಜ್ಯಪೂರ್ವ ಪ್ರಕರಣ 6949 ಪೈಕಿ 6029 ವಾಜ್ಯಪೂರ್ವ ಪ್ರಕರಣಗಳು ಲೋಕ ಅದಾಲತ್ತಿನಲ್ಲಿ ರಾಜಿಯಾಗುವ ಮೂಲಕ ಇತ್ಯಾರ್ಥವಾಗಿರುತ್ತವೆ. ಇದರ ಒಟ್ಟು ಮೊತ್ತ ರೂ. 1,34,59,724 (ಒಂದು ಕೋಟಿ (2ನೇಪುಟಕ್ಕೆ..)

## ನಿರ್ಮಲ ತುಂಗಭದ್ರಾ ಅಭಿಯಾನ : ವಿದ್ಯಾರ್ಥಿಗಳಲ್ಲಿ ಜಾಗೃತಿ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.13–** ತುಂಗಭದ್ರಾ ನದಿಯ ಮಾಲಿನ್ಯದ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಮತ್ತು ನದಿಯನ್ನು ಪುನರುಜ್ಜೀವನಗೊಳಿಸಲು ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನ ನೇತೃತ್ವದಲ್ಲಿ 'ನಿರ್ಮಲ ತುಂಗಭದ್ರಾ ಅಭಿಯಾನ'ದ ಮೂರನೇ ಹಂತದ ಪಾದಯಾತ್ರೆ ಇದೀಗ ಮಹತ್ವದ ಘಟ್ಟ ತಲುಪಿದೆ. ಗಂಗಾವತಿಯಿಂದ ಮಂತ್ರಾಲಯದ ತನಕ ಈ ಹಂತದ ಪಾದಯಾತ್ರೆ ನಡೆಯಲಿದೆ. ಇದರ ಭಾಗವಾಗಿ ಅಭಿಯಾನದ ತಂಡದ ಸದಸ್ಯರು ಶನಿವಾರ ನಗರದ ಸರ್ವೋದಯ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.

ಸಮೀಕ್ಷಾ ವರದಿಯು ತೀವ್ರ ಆತಂಕ ಮೂಡಿಸಿದ್ದು, ನದಿ ನೀರಿನಲ್ಲಿ ಅಲ್ಯೂಮಿನಿಯಂ ಅಂಶ ಮತ್ತು ಇತರೆ ವಿಷಕಾರಿ ತ್ಯಾಜ್ಯಗಳು ಮಿತಿಮೀರಿರುವುದು ದೃಢಪಟ್ಟಿದೆ. ನದಿಗೆ ಒಳಚರಂಡಿ ಮತ್ತು ಕೈಗಾರಿಕಾ ತ್ಯಾಜ್ಯಗಳು ನಿರಂತರವಾಗಿ ಸೇರುತ್ತಿರುವುದರಿಂದ, ಸರ್ಕಾರವು ಕೂಡಲೇ ಎಚ್ಚೆತ್ತುಕೊಂಡು ಕ್ರಮ ಕೈಗೊಳ್ಳದಿದ್ದರೆ, ತುಂಗಭದ್ರಾ ನದಿಯು ಬೆಂಗಳೂರಿನ ಸಂಪೂರ್ಣ ಕಲುಷಿತಗೊಂಡ ವೃಷಭಾವತಿ ನದಿಯಂತಾಗುವ ಅಪಾಯವಿದ್ದು ಈ ಹೋರಾಟದಲ್ಲಿ ರೈತರು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಪರಿಸರ ಪ್ರಿಯರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಅಭಿಯಾನದ ಜಿಲ್ಲಾ ಸಂಚಾಲಕ ಉದಯ ಕುಮಾರ್, ಪರಿಸರ ಪ್ರೇಮಿ ಲೋಕೇಶಪ್ಪ, ತಾಲೂಕ ಸಂಚಾಲಕ ರಾಘವೇಂದ್ರ ಚೌಡ್ಕಿ, ಸುರೇಶ ಚೇತನ್,ಅನೀತಾ ನವಲಕಲ್, ನಿವೇದಿತಾ, ಸರ್ವೋದಯ ನರ್ಸಿಂಗ್ ಕಾಲೇಜಿನ ಪ್ರಾಚರ್ಯರು ಶಿವಕುಮಾರ್, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

## ಈಡಿಗ ಒಳ ಪಂಗಡಗಳ ಏಳ್ಗೆಗಾಗಿ ಜ.6 ರಿಂದ 700 ಕಿಮೀ.ಐತಿಹಾಸಿಕ ಪಾದಯಾತ್ರೆ: ಡಾ.ಪ್ರಣವಾನಂದ ಸ್ವಾಮೀಜಿ



ಯುವಮಾರ್ಗ ಸುದ್ದಿ

**ಸಿಂಧನೂರು,ಡಿ.13–** ಕರ್ನಾಟಕ ರಾಜ್ಯದಲ್ಲಿ ಈಡಿಗ ಬಿಲ್ಲವ, ನಾಮಧಾರಿ, ಧೀವರ, ತೀಯ ಸೇರಿ, 26 ಒಳ ಪಂಗಡಗಳ ಸಮಾಜದ ಬೇಡಿಕೆ ಈಡೇರಿಕೆಗಾಗಿ ಜ.6 ರಿಂದ ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿಪೀಠದಿಂದ ಕರದಾಳದಿಂದ ಬೆಂಗಳೂರಿನವರೆಗೆ 700 ಕಿ.ಮೀ.41ದಿನ ಐತಿಹಾಸಿಕ ಪಾದಯಾತ್ರೆ ನಡೆಯಲಿದೆ ಎಂದು ಡಾ. ಪ್ರಣವಾನಂದ ಪರಮಪೂಜ್ಯ ಸ್ವಾಮಿಜಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ 40 ರಿಂದ 50 ಲಕ್ಷ ಜನರಿದ್ದೇವೆ, ಮಂಗಳೂರು, ಶಿವಮೊಗ್ಗ, ಉಡುಪಿ, ಕಾರವಾರ, ಜಿಲ್ಲೆಗಳಲ್ಲಿ ದೊಡ್ಡ ಮಟ್ಟದ ಸಮುದಾಯವಿದೆ. 23 ವಿಧಾನ ಸಭಾ ಕ್ಷೇತ್ರದಲ್ಲಿ 17 ವಿಧಾನಸಭಾ ಕ್ಷೇತ್ರದಲ್ಲಿ 1 ರಿಂದ 1.50 ಲಕ್ಷ ಜನರಿರುವ ಸಮುದಾಯವಾಗಿದೆ. ಈಗಿನ ಆಡಳಿತ ಪಕ್ಷದಲ್ಲಿ 4 ಜನ ಶಾಸಕರು, 2 ಜನ ಎಂಎಲ್ಸಿ, ಜೊತೆಗೆ ಒಬ್ಬರು ಮಂತ್ರಿ ಇದ್ದಾರೆ. ಈಡಿಗ ಸಮುದಾಯದ ಕುಲ ಕಸುಬು ಸೇಂದಿ ಇಳಿಸಿ ಮಾರಾಟ ಮಾಡಿ ಬದುಕುವ ಸಮಾಜ, ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಿನ ಅಬಕಾರಿ ಸಚಿವರಾಗಿದ್ದಾಗ ಸೇಂದಿಯಲ್ಲಿ ಸಿ.ಎಚ್.ಪೌಡರ್ ಹಾಕಿ ಮಾರಾಟ ಮಾಡುವುದು ಅಪರಾಧವೆಂಬ ಒಂದೇ ನೆಪವೊಡ್ಡಿ ಸಮಾಜದ ಕುಲ ಕಸುಬನ್ನೇ ಬಂದ್ ಮಾಡಿದರು.

ಆದರೆ ಯಾವುದೇ ಪರ್ಯಾಯದ ವ್ಯವಸ್ಥೆ ಮಾಡಲಿಲ್ಲ ರಾಜ್ಯದಲ್ಲಿ ನಿಕ್ಕರ್, ಪಬ್, ಗುಟ್ಕಾ, ಎಲ್ಲವೂ ಇದೆ, ಇದ್ಯಾಯಾವುದನ್ನು ಬಂದ್ ಮಾಡದೇ, ಬರೀ ಸೇಂದಿಯನ್ನಷ್ಟೇ ಬಂದ್ ಮಾಡಿ, ಸಮಾಜವನ್ನು ಆರ್ಥಿಕವಾಗಿ ಕುಗ್ಗುವಂತೆ ಮಾಡಿದರು. ಹೀಗಾಗಿ 2004 ರಿಂದ ಸೇಂದಿ ಮಾರಾಟ ನಿಂತು ಹೋಯಿತು. 2007 ರಲ್ಲಿ ಕುಮಾರಸ್ವಾಮಿ ಸರ್ಕಾರ ಸರಾಯಿ ಕೂಡ ಬಂದ್ ಮಾಡಿತು. ಈ ಕಾರಣದಿಂದ ಕಲ್ಯಾಣ ಕರ್ನಾಟಕದ ಈಡಿಗರು ಸಂಪೂರ್ಣವಾಗಿ ಬಡತನಕ್ಕೆ ಒಳಪಟ್ಟರು.

ಇದಕ್ಕೆಲ್ಲ ಕಾರಣ ಸರ್ಕಾರ ಜೊತೆಗೆ ಒಂದಷ್ಟು ನಮ್ಮ ಸಮುದಾಯದ ಮೇಲ್ವರ್ಗದವರು ಕಾರಣವಾಗಿದ್ದಾರೆ. ಹೀಗಾಗಿ ನಿರಂತರವಾಗಿ 5 ವರ್ಷಗಳಿಂದ ರಾಜ್ಯದಲ್ಲಿ ಅಷ್ಟೇ ಅಲ್ಲದೇ, 6 ರಾಜ್ಯಗಳಲ್ಲಿಯೂ ಸಹ ಹೋರಾಟ ನಡೆಸಿದ್ದೇವೆ, 2023 ರಲ್ಲಿ ಮಂಗಳೂರಿನಿಂದ ಹಿಡಿದು ಬೆಂಗಳೂರಿನವರೆಗೆ ಐತಿಹಾಸಿಕ ಪಾದಯಾತ್ರೆಯನ್ನು ಕೂಡ ನಡೆಸಿದ್ದೇವು.

ಈ ನಿಟ್ಟಿನಲ್ಲಿ ಮತ್ತೆ ಈಡಿಗ ಸೇರಿದಂತೆ ಎಲ್ಲಾ ಒಳ ಪಂಗಡಗಳ ಏಳ್ಗೆಗಾಗಿ ಜ.6 ರಿಂದ ಐತಿಹಾಸಿಕ ಪಾದಯಾತ್ರೆ ನಡೆಸಲು ತೀರ್ಮಾನಿಸಿದ್ದೇವೆ, ಬ್ರಹ್ಮಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮಕ್ಕೆ 500 ಕೋಟಿ ಬಿಡುಗಡೆ ಮಾಡಬೇಕು, ಈಡಿಗ ಸಮಾಜಕ್ಕೆ 5 ಎಕರೆ ಜಮೀನು ಪ್ರತಿ ಕೊಡಬೇಕು, 2ಎ ಯಿಂದ ಎಸ್.ಟಿ ಮೀಸಲಾತಿಗೆ ಸೇರಿಸಬೇಕು, ಬ್ರಹ್ಮಶ್ರೀ ನಾರಾಯಣ ಗುರುಗಳ ಪುತ್ಥಳಿ ವಿಧಾನಸೌಧದ ಎದುರುಗಡೆ ಸ್ಥಾಪಿಸಬೇಕು, ಮದ್ಯ ಮಾರಾಟದಲ್ಲಿ ಈಡಿಗ ಸಮಾಜದ ಸೇರಿದಂತೆ 26 ಪಂಗಡಗಳಿಗೆ ಶೇ.50 ರಷ್ಟು ಮಿಸಲಾತಿ ನೀಡಬೇಕು ಹಾಗೂ ಶಿವಮೊಗ್ಗ ಜಿಲ್ಲೆಯ ಮುಳಗುಡೆ ಸಂತ್ರಸ್ತರಿಗೆ ಸೂಕ್ತ ಪರಿಹಾರವಾಗಿ ಮನೆ ಹಾಗೂ ಜಮೀನು ನೀಡುವುದು ಸೇರಿದಂತೆ ಒಟ್ಟು 18 ಬೇಡಿಕೆಗಳು ಈಡೇರಿಕೆಗಾಗಿ ಒತ್ತಾಯಿಸಿ ಮನವಿ ಸಲ್ಲಿಸಿದರು.

ಈ ವೇಳೆ ಪವನ್ ಕುಮಾರ, ರಾಮಕೃಷ್ಣ, ಸುರೇಂದ್ರ, ಎಮ್.ಎನ್.ರಾಜಶೇಖರ್, ಪದ್ಮನಾಭ, ಶ್ರೀನಿವಾಸ, ಸೇರಿದಂತೆ ಅನೇಕರಿದ್ದರು.

## ಮಾಹಿತಿ ಕೊರತೆಯಿಂದ ವಿಕಲಚೇತನರಿಗೆ ಸರ್ಕಾರದ ಸೌಲಭ್ಯ ದೊರೆಯುತ್ತಿಲ್ಲ : ರಾಜಾ ವೆಂಕಟಪ್ಪ ನಾಯಕ

ಯುವಮಾರ್ಗ ಸುದ್ದಿ




**ಮಾನ್ವಿ,ಡಿ.13–** ಪಟ್ಟಣದ ಟಿ.ಎ.ಪಿ.ಎಂ.ಸಿ.ಎಸ್. ಆವರಣದಲ್ಲಿ ಸಂಕಲ್ಪ ವಿಕಲಚೇತನರ ಒಕ್ಕೂಟ ರಾಯಚೂರು ವತಿಯಿಂದ ನಡೆದ ವಿಶ್ವ ವಿಕಲಚೇತನರ ದಿನಾಚರಣೆ–2025 ಕಾರ್ಯಕ್ರಮವನ್ನು ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಉದ್ಘಾಟಿಸಿ ಮಾತನಾಡಿ ರಾಜ್ಯ ಸರ್ಕಾರವು ವಿಕಲಚೇತನರಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ ಹಾಗೂ ವಿವಿಧ ಯೋಜನೆಗಳ ಮೂಲಕ ಅನುದಾನವನ್ನು ಕೂಡ ನೀಡುತ್ತಿದೆ ಅದ್ದರೆ ಅವುಗಳು ವಿಕಲಚೇತನರಿಗೆ ದೊರೆಯದೆ ಇರುವುದಕ್ಕೆ ಮಾಹಿತಿ ಕೊರತೆಯು ಕೂಡ ಕಾರಣವಾಗಿರುವುದರಿಂದ ಸಂಕಲ್ಪ ವಿಕಲಚೇತನರ ಒಕ್ಕೂಟ ರಾಯಚೂರು ವತಿಯಿಂದ ವಿಕಲಚೇತನರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡುವುದಕ್ಕಾಗಿ ಕಾರ್ಯಕ್ರಮವನ್ನು ಅಯೋಜಿಸಲಾಗಿದೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ವಿಕಲಚೇತನರಿಗೆ ದೊರೆಯುವ ಸೌಲಭ್ಯಗಳನ್ನು ತಲುಪಿಸುವುದಕ್ಕೆ ಪ್ರಮಾಣಿಕವಾದ ಪ್ರಯತ್ನವನ್ನು ಮಾಡಿದಾಗ ಮಾತ್ರ ವಿಕಲಚೇತನರು ಕೂಡ ಸ್ವವಲಂಭಿ ಜೀವನವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ ವಿಕಲಚೇತನರು ತಮ್ಮಲಿರುವ ಕೊರತೆಗಳಿಗೆ ಕೊರಗದೆ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡು ಉತ್ತಮ ಸಾಧನೆಯನ್ನು ತೋರಬೇಕು ಹಾಗೂ ಸಮಾಜ ಮುಖಿ ಕಾರ್ಯಕ್ರಮಗಳನ್ನು ಸಂಸ್ಥೆಯ ವತಿಯಿಂದ ಅಯೋಜಿಸುವ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದು ತಿಳಿಸಿದರು.

ಕಲ್ಮಠದ ಶ್ರೀ ವಿರೂಪಾಕ್ಷಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಭಗವಂತ ಸಾಮಾನ್ಯ ವ್ಯಕ್ತಿಗಳಿಗಿಂತ ಹೆಚ್ಚಿನ ಸಾಮಾರ್ಥ್ಯವನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡಿರುತ್ತಾನೆ ಇಂದು ವಿಕಲಚೇತನರು ಎಲ್ಲಾ ರಂಗಗಳಲ್ಲಿಯು ಕೂಡ ಉತ್ತಮ ಸಾಧನೆಯನ್ನು ತೋರುತ್ತಿದ್ದಾರೆ ಪ್ಯಾರ ಓಲಂಪಿಕ್ ಕ್ರೀಡೆಗಳು ಇಂದು ಹೆಚ್ಚು ಜನಪ್ರಿಯವಾಗುತ್ತಿ ವೆ.ಅದ್ದರಿಂದ ಅತ್ಮವಿಶ್ವಸವನ್ನು ಕಳೆದುಕೊಳ್ಳದೆ ತಮ್ಮ ಬದುಕನ್ನು ಕಟ್ಟಿಕೊಳ್ಳುವಂತೆ ತಿಳಿಸಿದರು. ಹಿರಿಯ ಸಾಹಿತಿ (2ನೇ ಪುಟಕ್ಕೆ.....)

## ಗ್ರಾಮೀಣ ಭಾಗಗಳಿಗೂ ಮೂಲಸೌಕರ್ಯ ಒದಗಿಸಲು ಆದ್ಯತೆ: ಶಾಸಕ ತುರ್ವಿಹಾಳ

ಯುವಮಾರ್ಗ ಸುದ್ದಿ



**ಮಸ್ಕಿ,ಡಿ.13–** ಕ್ಷೇತ್ರದ ಸಮಗ್ರ ಹಾಗೂ ಸಮತೋಲನದ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದ್ದು, ಗ್ರಾಮೀಣ ಭಾಗಗಳಿಗೂ ಸಮಾನವಾಗಿ ಮೂಲಸೌಕರ್ಯ ಒದಗಿಸಲಾಗುತ್ತಿದೆ ಎಂದು ಶಾಸಕ ಹಾಗೂ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್. ಬಸನಗೌಡ ತುರ್ವಿಹಾಳ ಶನಿವಾರ ಹೇಳಿದರು.

ತಾಲ್ಲೂಕಿನ ಮೆರನಾಳ, ಗೋನಾಳ, ಹರ್ವಾಪೂರ, ಮುದಬಾಳ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಹಮ್ಮಿಕೊಂಡಿದ್ದ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ರಸ್ತೆ, ಕುಡಿಯುವ ನೀರು, ವಿದ್ಯುತ್, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಶಾಶ್ವತ ಪರಿಹಾರ ಒದಗಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದರು. ಗ್ಯಾರಂಟಿ ಯೋಜನೆಗಳ ಮೂಲಕ ಬಡವರು, ರೈತರು ಹಾಗೂ ಕಾರ್ಮಿಕ ವರ್ಗದ ಬದುಕು ಸುಧಾರಣೆಯಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಮೈಬುಸಾಬ ಮುದ್ದಾಪುರ, ಕಾಂಗ್ರೆಸ್ ಗ್ರಾಮೀಣ ಘಟಕದ ಅಧ್ಯಕ್ಷ ಹನುಮಂತಪ್ಪ ಮುದ್ದಾಪೂರ, ಪಂಪನ ಗೌಡ ಪಾಟೀಲ ಗುಡದೂರು, ಕ್ಯಾಷುಟೆಕ್ ಎಂಜಿನಿಯರ್ ತಿಮ್ಮಣ್ಣ ಉಪ್ಪಾರ ಸೇರಿದಂತೆ ಅನೇಕ ಮುಖಂಡರು ಇದ್ದರು.

## ಮೊದಲನೇಯ ಪುಟದಿಂದ

# ಸೋನಿಯಾ ಗಾಂಧಿ ಅಂಗಳಕ್ಕೆ ಕರ್ನಾಟಕ ಸಿಎಂ ಕುರ್ಚಿ ಚೆಂಡು

ನಾಯಕರನ್ನು ಭೇಟಿಯಾಗಿ ನಾಯಕತ್ವದ ಸ್ಪಷ್ಟನೆಗೆ ಒತ್ತಾಯಿಸಲಿದ್ದಾರೆ.ಡಿ.ಕೆ.ಶಿವಕುಮಾರ್ ಬೆಂಬಲಿಗರು ಕೂಡ ಸಿಎಂ ಸ್ಥಾನಕ್ಕೆ ಪಟ್ಟು ಹಿಡಿದಿದ್ದು ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸಲು ಮುಂದಾಗಿದ್ದಾರೆ.

ಸಿಎಂ, ಡಿಸಿಎಂ ದೆಹಲಿಗೆ ತೆರಳುತ್ತಿದ್ದು, ವೋಟ್‌ಚೋರಿ ಆಂದೋಲನ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿದ್ದಾರೆ. ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಚರ್ಚಿಸುವ ಸಾಧ್ಯತೆ ಇದೆ. ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ಯತೀಂದ್ರ ನೀಡಿದ ಹೇಳಿಕೆ ಹಾಗೂ ಅವರ ಬೆಂಬಲಿಗರ ಹೇಳಿಕೆ, ಡಿಕೆಶಿ ಬೆಂಬಲಿಗರು ನಡೆಸಿದ ಔತಣಕೂಟ ಸಂಬಂಧ ಹೈಕಮಾಂಡ್ ನಾಯಕರಿಗೆ ಪರಸ್ಪರ ದೂರು-ಪ್ರತಿದೂರುಗಳು ಸಲ್ಲಿಕೆಯಾಗಲಿವೆ ಎಂದು ತಿಳಿದುಬಂದಿದೆ.

ರಾಜ್ಯ ನಾಯಕತ್ವದ ಸಂಬಂಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸದೀಯ ಮಂಡಳಿಯ ನಾಯಕಿ ಸೋನಿಯಾಗಾಂಧಿ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸುರ್ಜೆವಾಲ್ ಅವರು ನಡೆಸಿದ ಒಂದು ಸುತ್ತಿನ ಮಾತುಕತೆ ಅಪೂರ್ಣಗೊಂಡಿತ್ತು. ಈಗ ಮತ್ತೆ ಕುರ್ಚಿ ಕದನ ಜೋರಾಗಿದ್ದು, ನಾಯಕರು ಈಗ ಯಾವ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂಬುದನ್ನು ಕಾದುನೋಡಬೇಕು.

ಒಟ್ಟಾರೆ ಕಾಂಗ್ರೆಸ್?ನ ಸಿಎಂ ಕುರ್ಚಿ ಸಮರ ಸದ್ಯಕ್ಕೆ ಬಗೆಹರಿಯುವ ಲಕ್ಷಣಗಳು ಕಂಡುಬರುತ್ತಿಲ್ಲ. ಬೆಳಗಾವಿ ಅಧಿವೇಶನ ಹಾಗೂ ಸಂಸತ್ ಅಧಿವೇಶನದ ನಂತರ ಏನಾಗುತ್ತದೋ ಕಾದು ನೋಡಬೇಕು.

# ದಂಪತಿಗಳನ್ನು ಒಗ್ಗೂಡಿಸಿದ ಲೋಕ ಅದಾಲತ್

ಮೂವತ್ತುನಾಲ್ಕು ಲಕ್ಷದ ಐವತ್ರೊಂಬತ್ತು ಸಾವಿರದ ಏಳುನೂರ ಇಪ್ಪತ್ತುನಾಲ್ಕು ರೂಪಾಯಿ ) ಆಗಿರುತ್ತದೆ. ಈ ಸಂದರ್ಭದಲ್ಲಿ ಪ್ರಧಾನ ಸಿವಿಲ್ ನ್ಯಾಯಧೀಶರಾದ ಅಂಬಣ್ಣ.ಕೆ ಹಾಗೂ ರಾಘವೇಂದ್ರ ಮುತಾಲಿಕ, ಕಲ್ಮಟ ವಕೀಲರು, ವಿಶ್ವನಾಥ, ನಾಗರಾಜ ಏಲಿಗಾರ, ಹಾಜಿಬಾಬು, ಅನೀಲ, ಶಶಿ ಹೊಸಮನಿ, ರವಿ, ಚಂದರಮತಿ, ವಿಜಯಲಕ್ಮೀ, ಪ್ರಮೋಧ, ಶಿವಲಿಂಗಪ್ಪ , ಕರಿಯಪ್ಪ ಇತರೆ ವಕೀಲರು ಹಾಜರಿದ್ದರು.

## ಮಾಹಿತಿ ಕೊರತೆಯಿಂದ ವಿಕಲಚೇತನರಿಗೆ ಸರ್ಕಾರದ ಸೌಲಭ್ಯ ದೊರೆಯುತ್ತಿಲ್ಲ : ರಾಜಾ ವೆಂಕಟಪ್ಪ ನಾಯಕ

ದೇವತರಾಜ್ ಎಸ್,ಬಪ್ಪೂರು ರವರು ವಿಶೇಷ ಉಪನ್ಯಾಸ ನೀಡಿದರು.

ಮುಸ್ಲಿಂ ಸಮುದಾಯದ ಧರ್ಮಗುರುಗಳಾದ ಸೈಯಾದ್ ಸಜ್ಜದ್ ಹುಸೇನಿ ಮತವಾಲೆ ಸಾಹೆಬ್ ಹಾಗೂ ಕ್ರೈಸ್ತ ಧರ್ಮ ಗುರುಗಳಾದ ಸೇಂಟೆ ಮೇರಿಸ್ ಕ್ಯಾಥೋಲಿಕ್ ಚರ್ಚ್ನ ಫಾ.ಸುರೇಶ ವಿನ್ಸೆಂಟ್ ದಿವ್ಯಸಾನಿಧ್ಯ ವಹಿಸಿ ತಮ್ಮ ಸಂದೇಶವನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಕಲಚೇತನರ ಸಬಲಿಕರಣ ಇಲಾಖೆಯ ಅಧಿಕಾರಿಗಳಾದ ವಿನೋದ ಕುಮಾರ, ಜೆ.ಡಿಎಸ್.ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ ರಾಜಾ ರಾಮಚಂದ್ರನಾಯಕ, ಮೌನೇಶಗೌಡ .ಹೆಚ್, ಗುಮ್ಮ ಬಸವರಾಜ,ಸೈಯಾದ್ ಖಾದ್ರಿ, ಪಿ.ರವಿಕುಮಾರ, ರಾಘವೇಂದ್ರ, ಆಂಜನೇಯ್ಯ,ಸುಬಾನ್ ಬೇಗ್, ಸಂಕಲ್ಪ ವಿಕಲಚೇತನರ ಒಕ್ಕೂಟದ ರಾಜ್ಯ ಪ್ರತಿನಿಧಿಗಳು ಜಿಲ್ಲಾ ಗೌ.ಅಧ್ಯಕ್ಷರಾದ ದೇಸಾಯಿ ದೊತರಬಂಡಿ, ಜಿಲ್ಲಾಧ್ಯಕ್ಷರಾದ ಶಿವಕುಮಾರ ಚಲ್ಮಲ್, ಜಿಲ್ಲಾ ಉಪಧ್ಯಾಕ್ಷರಾದ ಸಾವಿತ್ರಮ್ಮ ಹೆಚ್.ಎಂ. ತಾಲೂಕು ಅಧ್ಯಕ್ಷರಾದ ಲಕ್ಷ್ಮೀ ಉಟಕನೂರು,ಸಿರವಾರ ತಾ. ಅಧ್ಯಕ್ಷರಾದ ಅಮರೇಶಪಾಟೀಲ್ ಚಾಗಭಾವಿ,ಚಂದ್ರಶೇಖರ ಸೇರಿದಂತೆ ಇನ್ನಿತರರು ಇದ್ದರು.

## ವಿಜ್ಞಾನ ವಸ್ತು ಪ್ರದರ್ಶನ: ವಿದ್ಯಾರ್ಥಿಗಳಿಂದ ವಿಜ್ಞಾನ ಲೋಕ ಅನಾವರಣ



ಯುವಮಾರ್ಗ ಸುದ್ದಿ

**ಕೊಪ್ಪಳ,ಡಿ.13–** ವಿಜ್ಞಾನ ವಸ್ತು ಪ್ರದರ್ಶನದಿಂದ ಮಕ್ಕಳಲ್ಲಿ ಹುದುಗಿರುವ ಪ್ರತಿಭೆ, ಸೃಜನಾತ್ಮಕತೆ, ವೈಜ್ಞಾನಿಕ ಮನೋಭಾವ, ಕೌಶಲ ಹೊರಹೊಮ್ಮುತ್ತದೆ. ವಿಜ್ಞಾನಕ್ಕೆ ಸಂಬಂಧಿಸಿದ ಮಕ್ಕಳು ಮಾಡಿರುವ ನೂತನ ಮಾದರಿಗಳು ವೈಜ್ಞಾನಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುವಲ್ಲಿ ಸಂದೇಹವಿಲ್ಲ' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಗೌಡ ಪಾಟೀಲ ಹೇಳಿದರು.

ಇಲ್ಲಿನ ವಿದ್ಯಾಶ್ರೀ ಶಾಲೆಯಲ್ಲಿ ಶುಕ್ರವಾರ ಜಿಲ್ಲಾ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

'ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಗಾದೆ ಮಾತಿನಂತೆ ವಿಜ್ಞಾನ ವಸ್ತು ಪ್ರದರ್ಶನದಿಂದ ಮಕ್ಕಳಲ್ಲಿನ ನೈಜತೆ, ಕ್ರಿಯಾತ್ಮಕ ಚಟುವಟಿಕೆ ಹಾಗೂ ಮಕ್ಕಳ ಸುಪ್ತ ಪ್ರತಿಭೆ ಅರಳುತ್ತದೆ. ಇಂದಿನ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕಿದೆ' ಎಂದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲ ವಿಷಯಗಳ ಜ್ಞಾನ ಬಹಳ ಅವಶ್ಯವಿದೆ. ವಿದ್ಯಾರ್ಥಿಗಳು ಯಾವುದೇ ವಿಷಯವನ್ನು ನಿರ್ಲಕ್ಷ್ಯ ಮಾಡದೆ ಪ್ರತಿಯೊಂದು ವಿಷಯಗಳ ಅಧ್ಯಯನ ಮಾಡಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸು ಸಾಧಿಸಬೇಕು ಅಂದರೆ ಜ್ಞಾನ ಸಂಪಾದಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಸಂಸ್ಥೆಯ ಅಧ್ಯಕ್ಷ ಜಸ್ವಂತ್‌ರಾವ್ ಜೈನ್ ಮಾತನಾಡಿ, 'ವಿಜ್ಞಾನ ವಿಷಯಗಳ ಮಾದರಿ ಪ್ರದರ್ಶನ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದರಿಂದ ವಿಷಯಗಳ ಬಗ್ಗೆ ಹೆಚ್ಚಿನ ಜ್ಞಾನ ಪಡೆದುಕೊಳ್ಳಲು ಸಾಧ್ಯ. ಆದ್ದರಿಂದ ಎಲ್ಲ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಮುಂದೆ ಬರಬೇಕು' ಎಂದು ಹೇಳಿದರು.

ವಸ್ತು ಪ್ರದರ್ಶನದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಪರಮಾಣುಗಳ ರಚನೆ, ವಾಯು ಮಾಲಿನ್ಯ ನಿಯಂತ್ರಣ, ರಕ್ತ ಗುಂಪುಗಳ ಮಾಹಿತಿ, ನೀರಿನ ಮಟ್ಟ ಸೂಚಕ, ನೀರಿನ ಶುದ್ಧಿಕರಣ, ಬೆಳೆ ಸಂರಕ್ಷಣಾ ಮಾದರಿ, ಸೋಲಾರ್ ಟ್ರ್ಯಾಕಿಂಗ್ ಸಿಸ್ಟಮ್, ಮಿಶ್ರ ಬೇಸಾಯ ಸೇರಿದಂತೆ ವಿವಿಧ ಬಗೆಯ ಮಾದರಿ ಪ್ರದರ್ಶನ ಆಕರ್ಷಕವಾಗಿತ್ತು.

ಪ್ರಶಸ್ತಿ ವಿವರ: ಪ್ರದರ್ಶನದಲ್ಲಿ ವೈಯಕ್ತಿಕ ಹಾಗೂ ಗುಂಪು ವಿಭಾಗವಾಗಿ ಮಾಡಲಾಗಿತ್ತು. ವೈಯಕ್ತಿಕ ವಿಭಾಗದಲ್ಲಿ 8 ತಂಡ, ಗುಂಪು ವಿಭಾಗದಲ್ಲಿ 8 ತಂಡ ಭಾಗವಹಿಸಿದ್ದವು.

ಸೋಮಶೇಖರಗೌಡ ಪಾಟೀಲ ಡಿಡಿಪಿಐ ಕೊಪ್ಪಳವಿದ್ಯಾರ್ಥಿಗಳು ಮಾಡಿರುವ ಚಿಕ್ಕ ಚಿಕ್ಕ ಪ್ರಯೋಗಗಳು ಮುಂದೆ ಅದ್ಭುತವಾದಂತಹ ಸಂಶೋಧನೆಗೆ ಕಾರಣವಾಗಬಹುದು. ಪ್ರತಿಯೊಬ್ಬರೂ ವಿಜ್ಞಾನದಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು. ಎಲ್.ಡಿ ಜೋಶಿ, ನಾಗರಾಜ್ ಜುಮ್ಮಣ್ಣವರ್, ಸೋಮಶೇಖರ್ ಹರ್ತಿ, ಮಹೇಶ್ ಸಬರದ, ಹೇಮಣ್ಣ ಕುಕನೂರ, ಜಾಕಿರ್ ಹುಸೇನ್ ಕೊಪ್ಪಳ, ಈರಣ್ಣ ಹೆಬ್ಬಾಳ್, ಸುರೇಶ್ ಬಳೂಟಗಿ ಇದ್ದರು.

# ತಲಾ ಆದಾಯ ಹೆಚ್ಚಳಕ್ಕೆ ಯೋಜನೆ ರೂಪಿಸಿ




**ಬೀದರ್:ಡಿ.13–** ವಾರ್ಷಿಕ ತಲಾ ಆದಾಯದಲ್ಲಿ ಕರ್ನಾಟಕ ನಂಬರ್ ಒನ್ ಇದ್ದರೂ, ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಜಿಲ್ಲೆಗಳು ತೀರ ಹಿಂದುಳಿದಿವೆ. ತಲಾ ಆದಾಯ ಅಂಕಿ ಸಂಖ್ಯೆ ಗಮನಿಸಿದರೆ ನಮ್ಮ ಭಾಗದ ಆರ್ಥಿಕತೆ ಹಾಗೂ ಜನರ ಜೀವನಮಟ್ಟ ಎಷ್ಟು ಕೆಳಮಟ್ಟದಲ್ಲಿದೆ ಎಂಬುದು ತೋರಿಸುತ್ತದೆ. ಸರ್ಕಾರ ಇದನ್ನು ಗಂಭೀರ ಪರಿಗಣಿಸಿ ತಲಾ ಆದಾಯ ಹೆಚ್ಚಳಕ್ಕೆ ವಿಶೇಷ ಯೋಜನೆ ರೂಪಿಸಬೇಕು ಎಂದು ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಆಗ್ರಹಿಸಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಶುಕ್ರವಾರ ಉತ್ತರ ಕರ್ನಾಟಕ ಭಾಗದ ವಿಶೇಷ ಚರ್ಚೆ ಮೇಲೆ ಮಾತನಾಡಿದ ಅವರು, ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಸೇರಿ ಎಲ್ಲ ಜಿಲ್ಲೆಗಳು ತಲಾ ಆದಾಯದಲ್ಲಿ ಕೊನೇ ಸ್ಥಾನದಲ್ಲಿರುವುದು 2024-25ನೇ ಸಾಲಿನ ಆರ್ಥಿಕ ಸಮೀಕ್ಷೆ, ಹಣಕಾಸು ಇಲಾಖೆ ಅಂಕಿಅಂಶ ತಿಳಿಸುತ್ತಿವೆ. ಬೆಂಗಳೂರಿನ ತಲಾ ಆದಾಯ 6 ಲಕ್ಷಕ್ಕೂ ಹೆಚ್ಚಿದೆ. ನಮ್ಮ ಜಿಲ್ಲೆಗಳ ಪ್ರಮಾಣ 1.50 ಲಕ್ಷ ದಾಟಿಲ್ಲ. ಕಲ್ಯಾಣ ಕರ್ನಾಟಕ ವಿಭಾಗ ಕೇಂದ್ರ ಕಲಬುರಗಿ ಜಿಲ್ಲೆಯ ತಲಾ ಆದಾಯ ರಾಜ್ಯದಲ್ಲೇ ಅತೀ ಕಡಿಮೆ 1.30 ಲಕ್ಷವಿದೆ. ಈ ಸಂಖ್ಯೆ ಕಳವಳಕಾರಿಯಾಗಿವೆ. ಸರ್ಕಾರ ಏನು ಮಾಡುತ್ತಿದೆ ಎಂದು ಪ್ರಶ್ನಿಸಿ ಸದನದ ಗಮನ ಸೆಳೆದರು.

ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗಿಂತ ಬೆಂಗಳೂರಿನ ತಲಾ ಆದಾಯ 4-5 ಪಟ್ಟು ಹೆಚ್ಚಿದೆ. ಹಾಗಾದರೆ ನಮ್ಮ ಭಾಗದ ಜನರ ಸ್ಥಿತಿ, ಆರ್ಥಿಕತೆ ಸುಧಾರಿಸುವುದು ಯಾವಾಗ? ಮಳೆಯಾಧಾರಿತ ಕೃಷಿ, ಕಡಿಮೆ ಕೈಗಾರಿಕೆ, ಶಿಕ್ಷಣದ ಕೊರತೆ ಇದಕ್ಕೆ ಪ್ರಮುಖ ಕಾರಣವಿದೆ. ಸಮಸ್ಯೆ ಮೂಲ ಹುಡುಕಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಯಾವ್ಯಾವ ಯೋಜನೆಗಳ ಮೂಲಕ ತಲಾ ಆದಾಯ ಹೆಚ್ಚಿಸಲಾಗುತ್ತದೆ ಎಂಬುದು ಸರ್ಕಾರ ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿದರು.

**ಪೋಲಾಗುತ್ತಿದೆ ನಮ್ಮ ನೀರು:** ಈ ಭಾಗದ ನೀರಾವರಿ ವಿಷಯ ಪ್ರಸ್ತಾಪಿಸಿದ ಶಾಸಕ ಬೆಲ್ದಾಳೆ, ಕಾವೇರಿಗೆ ನೀಡುವ ಪ್ರಾಮುಖ್ಯತೆ ಕೃಷ್ಣಾ, ಗೋದಾವರಿ ಜಲಾನಯನ ಸೇರಿ ನಮ್ಮ ಭಾಗದ ನೀರಾವರಿಗಳಿಗೆ ಏಕೆ ಕೊಡುತ್ತಿಲ್ಲ ಎಂದು ಪ್ರಶ್ನಿಸಿದರು.

ಬೆಳಗಾವಿ ಜಿಲ್ಲೆಯ 14 ಏತ ನೀರಾವರಿ ಯೋಜನೆಗಳಿಗೆ ಹಿಂದಿನ ಬಿಜೆಪಿ ಸರ್ಕಾರ ಅಸ್ತು ನೀಡಿ 5 ಸಾವಿರ ಕೋಟಿ ರೂ. ಘೋಷಿಸಿತ್ತು. ಆದರೆ ಈ ಸರ್ಕಾರ ಇದಕ್ಕೆ ಹಣವೇ ನೀಡಿಲ್ಲ. ಕಳಸಾಬಂಡೂರಿ ಯೋಜನೆ ನೆನೆಗುದಿಗೆ ಬಿದ್ದಿದೆ. ಕೃಷ್ಣಾ ಮೇಲ್ದಂಡೆ 3ನೇ ಹಂತದ ಕೆಲಸ ಆರಂಭಿಸುತ್ತಿಲ್ಲ. ಕಲಬುರಗಿ ಜಿಲ್ಲೆಯ ಭೀಮಾ, ಸೊನ್ನ ಇತರೆ ನೀರು ಸದ್ಬಳಕೆಗೆ ಕ್ರಮವಿಲ್ಲ. ಬಚಾವತ್ ಆಯೋಗದ ತೀರ್ಪಿನಂತೆ ಬೀದರ್ ಜಿಲ್ಲೆಯ ಗೋದಾವರಿ ಜಲಾನಯನದ ಇನ್ನೂ 8 ಟಿಎಂಸಿ ನೀರಿನ ಬಳಕೆಗೆ ಅನುದಾನ ಕೊಡುತ್ತಿಲ್ಲ. ಏತ ನೀರಾವರಿ, ಹೊಸ ಬ್ಯಾರೇಜ್ ನಿರ್ಮಾಣಕ್ಕೆ ಯೋಜನೆ ರೂಪಿಸುತ್ತಿಲ್ಲ. ಹೀಗಾಗಿ ನಮ್ಮ ನೀರು ತೆಲಂಗಾಣಕ್ಕೆ ಹರಿದುಹೋಗುತ್ತಿದೆ. ಸರ್ಕಾರ ನೀರಾವರಿ ಯೋಜನೆ ಕೈಗೆತ್ತಿಕೊಂಡು ನುಡಿದಂತೆ ನಡೆಯಲಿ ಎಂದರು.

**ಖಾಲಿ ಹುದ್ದೆ ಭರ್ತಿ ಯಾವಾಗ**? ಕಕ ಭಾಗದಲ್ಲಿ 30 ಸಾವಿರಕ್ಕೂ ಹೆಚ್ಚು ಹುದ್ದೆ ಖಾಲಿಯಿದ್ದು, ಆಡಳಿತ ವ್ಯವಸ್ಥೆ ಸಂಪೂರ್ಣ ನಿಷ್ಕ್ರಿಯವಾಗಿದೆ. 5 ವರ್ಷದಲ್ಲಿ ಹಂತ-ಹಂತವಾಗಿ ಹುದ್ದೆ ಭರ್ತಿ ಮಾಡುತ್ತೇವೆ ಎಂಬ ಭರವಸೆ ಹುಸಿಯಾಗಿದೆ.ಹಿಂದಿನ ಎರಡೂವರೆ ವರ್ಷದಲ್ಲಿ 3 ಸಾವಿರ ಹುದ್ದೆ ಸಹ ತುಂಬಿಲ್ಲ. ಬೀದರ್ ಜಿಲ್ಲೆಯಲ್ಲಿ ಒಬ್ಬ ಅಧಿಕಾರಿಗೆ ಎರಡ್ಮೂರು ಪ್ರಭಾರ. ಹೀಗಾದರೆ ಅವರು ಕೆಲಸ ಹೇಗೆ ಮಾಡುತ್ತಾರೆ? ಜನರ ಸಮಸ್ಯೆಗೆ ಸ್ಪಂದನೆ ಹೇಗೆ? ಅಭಿವೃದ್ಧಿಗೆ ವೇಗ ಎಲ್ಲಿಂದ ಸಿಗುತ್ತದೆ ಎಂದು ಪ್ರಶ್ನಿಸಿದರು.

**ಕೈಗಾರಿಕೆಗೆ ಉತ್ತೇಜನ ನೀಡಿ:** ಬೀದರ್ ಸೇರಿ ನಮ್ಮ ಭಾಗದಲ್ಲಿ ಕೈಗಾರಿಕೆಗಳಿಲ್ಲ. ಹೀಗಾಗಿ ದುಡಿಯುವ ಕೆಲಸಗಳಿಗೆ ಉದ್ಯೋಗವಿಲ್ಲ. ಇದು ನಮ್ಮ ಭಾಗದ ಅಭಿವೃದ್ಧಿ ಹಿನ್ನೆಡೆ ತರುತ್ತಿದೆ.ಕೈಗಾರಿಕೆ ಸ್ಥಾಪನೆಗೆ ಆದ್ಯತೆ ಕೊಡಬೇಕು. ಐಟಿ-ಬಿಟಿ ಮೀಟ್ ಬೆಂಗಳೂರು ಬದಲು ಹಿಂದುಳಿದ ನಮ್ಮ ಭಾಗದಲ್ಲಿ ನಡೆಸಬೇಕು. ಕಲಬುರಗಿಯವರಾದ ಐಟಿ,ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಇತ್ತ ಚಿತ್ತಹರಿಸಬೇಕು. ಸರ್ಕಾರ ಈ ಭಾಗದ ಎಲ್ಲ ಜಿಲ್ಲೆಗಳಲ್ಲಿ ದೊಡ್ಡ ಕಂಪನಿಗಳಿಂದ ಪ್ರತಿ ವರ್ಷ ಉದ್ಯೋಗ ಮೇಳ ಸಂಘಟಿಸಿ ನಿರುದ್ಯೋಗಿಗಳಿಗೆ ಕೆಲಸ ಕೊಡಿಸಬೇಕು ಎಂದು ಬೆಲ್ದಾಳೆ ಗಮನ ಸೆಳೆದರು.

ಅನುಭವ ಮಂಟಪ ಬೇಗ ಮುಗಿಸಿ: ಬಸವಕಲ್ಯಾಣದಲ್ಲಿ ನೂತನ ಅನುಭವ ಮಂಟಪಕ್ಕೆ ಹಿಂದಿನ ನಮ್ಮ ಸರ್ಕಾರದಲ್ಲಿ ಯಡಿಯೂರಪ್ಪ ಅವರು 200 ಕೋಟಿ ರೂ. ನೀಡಿದ್ದರು. ಆದರೆ ಈ ಸರ್ಕಾರ ಕೇವಲ 50 ಕೋಟಿ ಕೊಟ್ಟಿದೆ. 750 ಕೋಟಿ ವೆಚ್ಚದ ಈ ಕಾಮಗಾರಿಗೆ ವೇಗ ನೀಡಿ ಆದ್ಯತೆ ಮೇಲೆ ಮುಗಿಸಿ ಬಸವಕಲ್ಯಾಣ ವಿಶ್ವದ ಪ್ರಮುಖ ಆಧ್ಯಾತ್ಮಿಕ, ಧಾರ್ಮಿಕ ಪ್ರವಾಸಿ ತಾಣವಾಗಿಸಬೇಕು ಎಂದು ಆಗ್ರಹಿಸಿದರು.

**ಪರಿಶಿಷ್ಟರ ಓಣಿ ಅಭಿವೃದ್ಧಿಪಡಿಸಿ:**ಎಸ್ಸಿಪಿ/ಟಿಎಸ್‌ಪಿ ಅಡಿ ಸರ್ಕಾರ ವರ್ಷಕ್ಕೆ ನಮ್ಮ ವಿಧಾನಸಭೆ ಕ್ಷೇತ್ರಕ್ಕೆ ಕೇವಲ 50 ಲಕ್ಷ ನೀಡುತ್ತಿದೆ. ಇದು ಏತಕ್ಕೂ ಸಾಲದು. ಮಾತೆತ್ತಿದರೆ ಸಿಎಂ, ಡಿಸಿಎಂ ಅವರು ಪರಿಶಿಷ್ಟರ ಅಭಿವೃದ್ಧಿಗೆ ನಮ್ಮ ಆದ್ಯತೆ ಎನ್ನುತ್ತಾರೆ. ಈ ಮಾತು ನಿಜವಾಗಬೇಕಾದರೆ ಅನುದಾನ ಹೆಚ್ಚಿಸಿ ಪರಿಶಿಷ್ಟರ ಬಡಾವಣೆಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಕೋರಿದರು.

**ಸದನದಲ್ಲಿ ಚರ್ಚೆಯ ಲಾಭವೇನು**?:ಕಳೆದ ವರ್ಷದ ಚಳಿಗಾಲದ ಅಧಿವೇಶನದಲ್ಲಿ ಈ ಭಾಗದ ಜನರ, ರೈತರ ಹಿತದಿಂದ ಅನೇಕ ಜ್ವಲಂತ ವಿಷಯ ಪ್ರಸ್ತಾಪಿಸಿ ಸುದೀರ್ಘ ಚರ್ಚೆ ನಡೆಸಲಾಗಿದೆ. ಆದರೆ ವರ್ಷ ಕಳೆದರೂ ಬಹುತೇಕ ಸಮಸ್ಯೆಗಳಿಗೆ ಸ್ಪಂದನೆ ಸಿಕ್ಕಿಲ್ಲ. ಹಾಗಾದರೆ ಚರ್ಚೆ ಮಾಡಿ ಲಾಭವೇನು? ಈ ಭಾಗದ ಪ್ರಗತಿಗೆ ಪೂರಕವಾಗಲೆಂದೇ ನಡೆಸುತ್ತಿರುವ ಈ ಅಧಿವೇಶನದ ಮೂಲ ಆಶಯಕ್ಕೆ ಇದು ಕೊಡಲಿ ಪೆಟ್ಟು ಹಾಕಿದಂತಲ್ಲವೆ? ಚರ್ಚೆ ಎಂದು ಶಾಸಕ ಶೈಲೇಂದ್ರ ಬೆಲ್ದಾಳೆ ಪ್ರಶ್ನಿಸಿ ಸದನದ ಗಮನ ಸೆಳೆದರು.

**ಅನುದಾನ ತಾರತಮ್ಯ ನಿವಾರಿಸಿ:** ಪ್ರಾದೇಶಿಕ ಅಸಮತೋಲನ ನಿವಾರಣೆ ಸಂಬಂಧ ಹೊಸ ಅಭಿವೃದ್ಧಿ ಸೂಚ್ಯಂಕ ಸಿದ್ಧಪಡಿಸಲು ಸರ್ಕಾರ ಕೂಡಲೇ ಆರ್ಥಿಕ ತಜ್ಞ ಗೋವಿಂದರಾವ್ ಸಮಿತಿಯಿಂದ ವರದಿ ತರಿಸಿಕೊಂಡು ಅನುದಾನ ತಾರತಮ್ಯ ನಿವಾರಿಸಬೇಕು ಎಂದು ಶಾಸಕ ಬೆಲ್ದಾಳೆ ಒತ್ತಾಯಿಸಿದರು. ಸಮಿತಿ ಕಳೆದ ಸೆಪ್ಟೆಂಬರ್‌ನಲ್ಲೇ ವರದಿ ನೀಡಬೇಕಿತ್ತು. ಸರ್ಕಾರ ಇನ್ನೂ ವಿಳಂಬ ಮಾಡಬಾರದು. ಬೀದರ್ ದಕ್ಷಿಣ ಸೇರಿ ಈ ಭಾಗದ 10ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳು ಅಭಿವೃದ್ಧಿ ಸೂಚ್ಯಂಕ ಮಾನದಂಡದ ಪ್ರಕಾರ ಅನುದಾನದ ತೀವ್ರ ತಾರತಮ್ಯಕ್ಕೆ ಒಳಗಾಗಿವೆ. ಬೀದರ್ ಜಿಲ್ಲೆಯ ಬೇರೆ ಕ್ಷೇತ್ರಕ್ಕೆ ವರ್ಷಕ್ಕೆ 65-70 ಕೋಟಿ ಅನುದಾನ ಬಂದರೆ ಹಳ್ಳಿಗಳಿಂದ ಕೂಡಿದ ದಕ್ಷಿಣಕ್ಕೆ ಕೇವಲ 26-28 ಕೋಟಿ ಬರುತ್ತಿರುವುದು ದೊಡ್ಡ ಅನ್ಯಾಯವಲ್ಲವೆ? ಅನುದಾನ ಕೊರತೆಯಾಗಿ ಅಭಿವೃದ್ಧಿ ಕುಂಠಿತವಾಗಿದೆ. ಸರ್ಕಾರ ತಕ್ಷಣ ಗೋವಿಂದರಾವ್ ಸಮಿತಿ ವರದಿ ತರಿಸಿಕೊಳ್ಳಬೇಕು. ನಮಗೂ ಸರಾಸರಿ 75 ಕೋಟಿ ರೂ. ಅನುದಾನ ಸಿಗುವಂತಾಗಬೇಕು ಎಂದು ಆಗ್ರಹಿಸಿದರು.

**ಕಾರಂಜಾ ಸಂತ್ರಸ್ತರು ವಿಷ ಕೇಳ್ತಿದ್ದಾರೆ ಸರ್!:** ವೈಜ್ಞಾನಿಕ ಪರಿಹಾರಕ್ಕಾಗಿ ದಶಕಗಳಿಂದ ಹೋರಾಟ ನಡೆಸಿರುವ ಕಾರಂಜಾ ನೀರಾವರಿ ಯೋಜನೆ ಮುಳುಗಡೆ ಸಂತ್ರಸ್ತರು ಮನೆಗೆ ಬಂದು ವಿಷ ಕೊಡಿ ಅಂತಿದ್ದಾರೆ ಸರ್, ಇವರ ಸಮಸ್ಯೆ ಬೇಗ ಪರಿಹರಿಸಿ ಎಂದು ಶಾಸಕ ಬೆಲ್ದಾಳೆ ಸದನದ ಗಮನ ಸೆಳೆದರು. ಈ ಹಿಂದೆ ರೈತರು ಅಹೋರಾತ್ರಿ ಧರಣಿ ನಡೆಸಿದ್ದರು. ಇವರಿಗೆ ಸೂಕ್ತ ಪರಿಹಾರ ನೀಡುವ ಸಂಬಂಧ ಪ್ರಾದೇಶಿಕ ಆಯುಕ್ತರಿಂದ 3 ತಿಂಗಳಲ್ಲಿ ಸಮಗ್ರ ವರದಿ ಪಡೆಯುವುದಾಗಿ ಸರ್ಕಾರ ಹೇಳಿತ್ತು. ಆದರೆ ಎಂಟು ತಿಂಗಳಾದರೂ ಏನೂ ಆಗಿಲ್ಲ. ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ನಾನು ಧರಣಿ ಸ್ಥಳಕ್ಕೆ ಹೋಗಿ ರೈತರಿಗೆ ಜ್ಯೂಸ್ ಕುಡಿಸಿ ಧರಣಿ ಹಿಂಪಡೆಯಲು ಕೋರಿದ್ದೇವು. ಇದಕ್ಕೆ ಸ್ಪಂದಿಸಿ ಅವರು ಧರಣಿ ಕೈಬಿಟ್ಟರು. ಆದರೀಗ ಮನೆಗೆ ಬಂದು ಆಗ ಜ್ಯೂಸ್ ಕೊಟ್ಟಿರಿ, ಈಗ ವಿಷ ಕೊಡಿ ಅಂತಿದ್ದಾರೆ. ಏನ್ಮಾಡೋದು ಹೇಳಿ ಸರ್? ರೈತರು ಮತ್ತೆ ಡು ಆರ್ ಡೈ ಹೋರಾಟಕ್ಕಿಳಿಯುವ ಮುನ್ನ ಇವರ ಬೇಡಿಕೆ ಈಡೇರಿಸಿ ಎಂದು ಕೋರಿದರು.

## ಯೂಟ್ಯೂಬ್ ಮೂಲಕ ಸಾಮೂಹಿಕಆಸ್ತಿಗಳ ಅಂತರಾಷ್ಟ್ರೀಯ ಮಟ್ಟದ ಸಮ್ಮೇಳನ



**ಕಲಬುರ್ಗಿ:ಡಿ.13–** ಜೇವರ್ಗಿ ತಾಲೂಕ ಪಂಚಾಯಿತಿಯ ಸಾಮಥ್ರ್ಯ ಸೌಧದಲ್ಲಿ ಫೌಂಡೇಶನ್ ಫಾರ್ ಎಕಲಾಜಿಕಲ್ ಸೆಕ್ಯೂರಿಟಿ ಸಂಸ್ಥೆಯು ಮುಂದಾಳತ್ವದಲ್ಲಿ ಗುರುವಾರ ಸಾಮೂಹಿಕ ಆಸ್ತಿಗಳ ಅಂತರಾಷ್ಟ್ರೀಯ ಮಟ್ಟದ ಸಮ್ಮೇಳನ ಕಾರ್ಯಕ್ರಮ ಜೂಮ್ ಮೀಟಿಂಗ್ ಮತ್ತು ಯುಟ್ಯೂಬ್ ಮೂಲಕ ಜರುಗಿತು.

ಅಂತರಾಷ್ಟ್ರೀಯ ಮಟ್ಟದ ಈ ಸಮ್ಮೇಳನವು ಹಲವು ವಿಷಯಗಳನ್ನು ಒಳಗೊಂಡಿದ್ದು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸಮುದಾಯ ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಕಾಮಗಾರಿಗಳ ಪ್ರಮುಖ ಕಾರ್ಯ ವೈಖರಿ ಬಗ್ಗೆ ಹಲವು ರಾಜ್ಯಗಳ ಪ್ರತಿನಿಧಿಗಳು ತಮ್ಮ ತಮ್ಮ ಕಾರ್ಯಕ್ರಮಗಳನ್ನು ಪ್ರೋಜೆಕ್ಟೇಶನ್ ಹಾಗೂ ದೂರವಾಣಿ ಮುಖಾಂತರ ಚರ್ಚಾ ವಿಷಯವಾಗಿ ವಿವರಿಸಿದರು.

ಈ ಸಮ್ಮೇಳನದಲ್ಲಿ ಭಾರತ ದೇಶದ ಎಲ್ಲಾ ರಾಜ್ಯಗಳು ಹಾಗೂ ವಿದೇಶದ ಮಾಹಿತಿ ನೈಸರ್ಗಿಕ ಸಂಪನ್ಮೂಲಗಳ ಉಪಯುಕ್ತತೆ ಮತ್ತು ಸದ್ಬಳಕೆ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾಹಿತಿ ಹಂಚಿಕೊಂಡರು.ಕರ್ನಾಟಕ ರಾಜ್ಯದ ಸರ್ಕಾರಿ ಸಾಮೂಹಿಕ ಆಸ್ತಿಗಳನ್ನ ಉಳಿಸುವಲ್ಲಿ ಮಹಿಳೆಯರು ಮತ್ತು ಗ್ರಾಮ ಪಂಚಾಯಿತಿಯ ಜನಪ್ರತಿನಿದಿನಗಳ ಪಾತ್ರದ ಬಗ್ಗೆ ಗ್ರಾಮ ಪರಿಸರ ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳು ಭಾಗವಹಿಸಿ ಗ್ರಾಮಗಳಲ್ಲಿ ಪರಿಸರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ಚರ್ಚಿಸಿದರು. ಚರ್ಚಿಸಿದರು.

ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ರವಿಚಂದ್ರ ರೆಡ್ಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಐಇಸಿ ಸಂಯೋಜಕರಾದ ಚಿದಂಬರ ಪಾಟೀಲ, ಎನ್ ಆರ್ ಎಲ್ ಎಂ ಯೋಜನೆ ತಾಲೂಕು ವ್ಯವಸ್ಥಾಪಕ ಚಂದ್ರಶೇಖರ, ಸಿಎಸ್ ಅಶ್ವಿನಿ, ಪ್ರಮೋದ್, ಸ್ವಸಹಾಯ ಸಂಘಗಳ ಒಕ್ಕೂಟದ ಸದಸ್ಯರು, ಎಲ್ಲಾ ಎಲ್ಲ ಗ್ರಾಮ ಪಂಚಾಯತಿಗಳ ಎಂಬಿಕೆ, ಕೃಷಿ ಸಖಿ, ಪಶು ಸುಖಿ ಮತ್ತು ಎಲ್ ಸಿ ಆರ್ ಪಿ, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

# ಮಹತ್ವಕಾಂಕ್ಷಿ ಕ್ರೀಡಾ ಯೋಜನೆಗಳು ಹಾಗೂ ಕ್ರೀಡೆಯ ಭವಿಷ್ಯ?

ನವಂಬರ್ 25 ರಿಂದ ಡಿಸೆಂಬರ್ ನಾಲ್ಕರವರೆಗೆ ರಾಜಸ್ಥಾನದ ಜೈಪುರದ ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಖೇಲೋ ಇಂಡಿಯಾ ರಾಷ್ಟ್ರ ಮಟ್ಟದ ಕ್ರೀಡಾ ಕೂಟ ನಡೆಯಿತು. ಭವಿಷ್ಯದ ಕ್ರೀಡಾಪಟುಗಳನ್ನು ಗುರುತಿಸುವ ಗುರುತರ ಜವಾಬ್ದಾರಿಯನ್ನು ಹೊಂದಿರುವ ಈ ಕ್ರೀಡಾಕೂಟದಲ್ಲಿ ಬಹುತೇಕ ರಾಷ್ಟ್ರದ ಎಲ್ಲಾ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಭಾಗವಹಿಸಬೇಕಿತ್ತು. ಆದರೆ ಬೆರಳೆಣಿಕೆಯಷ್ಟು ಜನರು ಮಾತ್ರ ಒಂದೊಂದು ಆಟಗಳಲ್ಲಿ ಭಾಗವಹಿಸಿದ್ದರು. ಮತ್ತೆ ಕೆಲವರು ಆಯ್ಕೆಯಾಗಿದ್ದರು ಕೂಡ ಕ್ರೀಡೆಯಲ್ಲಿ ಭಾಗವಹಿಸಲಿಲ್ಲ. ಈ ಕುರಿತ ವಿಡಿಯೋ ಒಂದನ್ನು ನೋಡಿದಾಗ ತುಸು ಆಶ್ಚರ್ಯದ ಜೊತೆಗೆ ಜಾಗೃತಿಯನ್ನು ಉಂಟುಮಾಡುವ ಅವಶ್ಯಕತೆಯನ್ನು ಮನಗಂಡು ಮಾಹಿತಿಯನ್ನು ಪಡೆದ ನಂತರ ಮೂಡಿದ ಲೇಖನ ನಿಮ್ಮ ಓದಿಗೆ.

ಖೇಲೊ ಇಂಡಿಯಾ ತರಬೇತಿ ಸಂಸ್ಥೆಗಳು ಹಾಗೂ ಕ್ರೀಡಾ ಅಕಾಡೆಮಿಗಳು ಖೇಲೋ ಇಂಡಿಯಾ ಯೋಜನೆಯಡಿ ಆಯ್ಕೆಯಾದ ನಂತರ ಅವರಿಗೆ ತರಬೇತಿಯ ಜೊತೆಗೆ ಆರ್ಥಿಕ ಧನ ಸಹಾಯ ಹಾಗೂ ಪ್ರತಿ ತಿಂಗಳು ನಿಗದಿತ ಮೊತ್ತದ ಪಾಕೆಟ್ ಅಲೋವೆನ್ಸ್ ದೊರೆಯುತ್ತದೆ. ರಾಷ್ಟ್ರಮಟ್ಟದಲ್ಲಿ ನಡೆಯುವ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಮೊದಲ ಮೂರುಸ್ಥಾನ ಗಳಿಸುವವರಿಗೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೌಕರಿಯ ಅನುಕೂಲತೆಯನ್ನು ಕೂಡ ಒದಗಿಸಲಾಗುತ್ತದೆ ಹಾಗೂ ಪದಕ ವಿಜೇತರಿಗೆ ನಿಗದಿತ ಮೊತ್ತವನ್ನು ಕೊಡ ಮಾಡಲಾಗುತ್ತದೆ.

ಭಾರತ ದೇಶದಲ್ಲಿ ಕ್ರೀಡಾ ಸಂಸ್ಕೃತಿಯನ್ನು ಉತ್ತೇಜಿಸುವ ಹಾಗೂ ಪ್ರತಿಭೆಗಳನ್ನು ಗುರುತಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾಗಿ ಗುರುತಿಸಲ್ಪಟ್ಟ ಖೇಲೋ ಇಂಡಿಯಾ ಕಾರ್ಯಕ್ರಮವು ಕೇಂದ್ರದ ಯುವಜನ ಮತ್ತು ಕ್ರೀಡಾ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ವಿಶಾಲವಾದ ಖೇಲೊ ಇಂಡಿಯಾ ಎಂಬ ಬೃಹತ್ ಪ್ರಮಾಣದ ಕ್ರೀಡಾ ಕೂಟಗಳನ್ನು ಭಾರತದ ಘನ ಸರ್ಕಾರವು ಆಯೋಜಿಸುತ್ತದೆ. ಪ್ರತಿ ಎರಡು ಜಿಲ್ಲೆಗಳಿಗೆ ಒಂದರಂತೆ ಒಟ್ಟು ಇಡೀ ದೇಶದಾದ್ಯಂತ 1041 ಖೇಲೋ ಇಂಡಿಯಾ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಖೇಲೋ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ವಿವಿಧ ಹಂತದ ಕ್ರೀಡಾಪಟುಗಳು 2025ರ ಸಾಲಿನಲ್ಲಿ ನಡೆದಿದ್ದು ಮುಖ್ಯವಾಗಿ ಮೂರು ಪ್ರಮುಖ ರೀತಿಯ

ಕ್ರೀಡಾಕೂಟಗಳನ್ನು ಆಯೋಜಿಸಲಾಗಿತ್ತು, ಇದರಲ್ಲಿ

ಖೇಲೊ ಇಂಡಿಯಾ ಯೂತ್ ಗೇಮ್ಸ್ ಎಂಬುದು ಯುವ ಕ್ರೀಡಾಪಟುಗಳಿಗಾಗಿ ನಡೆಸುವ ಪ್ರಮುಖ ಸ್ಪರ್ಧೆಯಾಗಿದ್ದು ಮೇ ತಿಂಗಳಲ್ಲಿ ಈ ಕ್ರೀಡಾಕೂಟವು ಬಿಹಾರ ರಾಜ್ಯದಲ್ಲಿ ನಡೆಯಿತು. 17 ವರ್ಷ ವಯಸ್ಸಿಗಿಂತ ಕಡಿಮೆ ಹಾಗೂ 21 ವರ್ಷ ವಯಸ್ಸಿಗಿಂತ ಕಡಿಮೆ ಇರುವ ವಿಭಾಗಗಳಲ್ಲಿ ಸ್ಪರ್ಧಿಸುವ ಅವಕಾಶವನ್ನು ಇಲ್ಲಿ ಕಲ್ಪಿಸಲಾಗುತ್ತದೆ. 28 ಬಗೆಯ ವಿವಿಧ ಕ್ರೀಡೆಗಳು ಇದರಲ್ಲಿ ಸೇರ್ಪಡೆಯಾಗಿದ್ದು ಯುವ ಜನತೆಯಲ್ಲಿ ಕ್ರೀಡೆಯ ಕುರಿತಾದ ಆಸಕ್ತಿಯನ್ನು ಹೆಚ್ಚಿಸಲು ಹಾಗೂ ಭವಿಷ್ಯದ ಕ್ರೀಡಾಪಟುಗಳನ್ನು ತಯಾರಿಸುವ ನಿಟ್ಟಿನಲ್ಲಿ ಇದೊಂದು ಅತ್ಯುತ್ತಮ ಪ್ರಯತ್ನವಾಗಿದೆ.

ಖೇಲೋ ಇಂಡಿಯಾ ವಿಂಟರ್ ಗೇಮ್ಸ್ ಎಂಬುದು ಚಳಿಗಾಲದ ಕ್ರೀಡೆಯಾಗಿದ್ದು 2025 ಈ ಆವೃತ್ತಿಯು ಹಾಗೂ ಜಮ್ಮು ಮತ್ತು ಕಾಶ್ಮೀರ, ಹಾಗೂ ಲಡಾಕ್ ಗಳಲ್ಲಿ ಎರಡು ಹಂತಗಳಲ್ಲಿ ನಡೆಯಿತು.

ಖೇಲೋ ಇಂಡಿಯಾ ಬೀಚ್ ಗೇಮ್ಸ್ ಎಂಬ ಮತ್ತೊಂದು ವಿಶೇಷವಾದ ಸ್ಪರ್ಧೆಯು ಕಡಲ ತೀರದ ಕ್ರೀಡೆಗಳಿಗಾಗಿ ಮೀಸಲಾಗಿದ್ದು ದಾದರ್ ಹಾಗೂ ನಗರ ಹವೇಲಿ ಮತ್ತು ದಮನ್ ಮತ್ತು ಡಯು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯಿತು.

ಕಡಲ ತೀರದಲ್ಲಿ ಆಡುವ ಆಟಗಳಾದ ವಾಲಿಬಾಲ್, ಬಾಸ್ಕೆಟ್ ಬಾಲ್, ಮಲ್ಲಕಂಬ, ಹಗ್ಗ ಜಗ್ಗಾಟ ಹಾಗೂ ಈಜುಗಳು ಇದರಲ್ಲಿ ಸೇರಿದ್ದವು.

ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ ಗಳು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ನಡೆಯುವ ಸ್ಪರ್ಧೆಯಾಗಿದ್ದು 2025ರ ಡಿಸೆಂಬರ್ ನಾಲ್ಕರವರೆಗೆ ಸುಮಾರು 11 ದಿನಗಳ ಕಾಲ ರಾಜಸ್ಥಾನದ ಜೈಪುರದಲ್ಲಿ ಈ ಕ್ರೀಡಾಕೂಟವು ನಡೆಯಿತು.

**ಸುಮಾರು 23ಕ್ಕೂ ಹೆಚ್ಚು ವಿವಿಧ ಬಗೆಯ ಸ್ಪರ್ಧೆಗಳು**

ಈ ಕ್ರೀಡಾಕೂಟದಲ್ಲಿ ನಡೆದಿದ್ದು, ಭಾರತ ದೇಶದ ಇನ್ನೂರಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಿಂದ ನಾಲ್ಕುವರೆ ಸಾವಿರದಿಂದ ಏಳು ಸಾವಿರ ವಿದ್ಯಾರ್ಥಿಗಳು ಭಾಗವಹಿಸಿರುವ ಈ ಕ್ರೀಡಾಕೂಟದಲ್ಲಿ ಭಾಗವಹಿಸಿದ ಬಹುತೇಕ ವಿದ್ಯಾರ್ಥಿಗಳು ಆಟದಲ್ಲಿ ಪಾಲ್ಗೊಳ್ಳದೆ ಹೋಗಿದ್ದಾರೆ.

400 ಮೀಟರ್ ಓಟದಲ್ಲಿ ಕುರುಕ್ಷೇತ್ರ ವಿಶ್ವವಿದ್ಯಾಲಯದಿಂದ ಬಂದ ಕೇವಲ ಓರ್ವ ವಿದ್ಯಾರ್ಥಿನಿ ಓಡಿದ್ದರೆ ಅದೇ 400 ಮೀಟರ್ ಹರ್ಡಲ್ಸ್ ನಲ್ಲಿ ಕೇವಲ ಓರ್ವ ವಿದ್ಯಾರ್ಥಿ ಓಡಿದ್ದು ತನ್ನ ಹಿಂದಿನ

ದಾಖಲೆಯನ್ನು ಮುರಿದು ಹೊಸ ದಾಖಲೆಯನ್ನು ಸೃಷ್ಟಿಸಿದ್ದಾನೆ. ಆದರೆ ಈ ಇಬ್ಬರು ಓಟಗಾರರಿಗೂ ಮೆಡಲುಗಳು ದೊರೆತಿಲ್ಲ.

ನಿಯಮದ ಪ್ರಕಾರ ಎಲ್ಲಾ ಯುನಿವರ್ಸಿಟಿಗಳ ಭಾಗವಹಿಸಿದ ವಿದ್ಯಾರ್ಥಿಗಳಲ್ಲಿ ಒಂದೊಂದು ಅಥ್ಲೆಟಿಕ್ ಕ್ರೀಡೆಯಲ್ಲಿಯೂ ಅತಿ ಹೆಚ್ಚು ಪಾಯಿಂಟ್ಗಳನ್ನು ಗಳಿಸಿರುವ ಕ್ರೀಡಾಪಟುಗಳಿಗೆ ಆಯ್ಕೆಯಲ್ಲಿ ಅವಕಾಶವಿದ್ದು ಈ ಹಿಂದೆ ನಡೆದಿರುವ ಯೂನಿವರ್ಸಿಟಿ ಮಟ್ಟದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಅಂತಿಮ ಘಟ್ಟವನ್ನು ತಲುಪಿರುವ ಮೊದಲ ಎಂಟು ಜನ ವಿದ್ಯಾರ್ಥಿಗಳನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಹೀಗೆ ರಾಷ್ಟ್ರ ಮಟ್ಟದಲ್ಲಿ ಖೇಲೋ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಆಟದ ಮೈದಾನಕ್ಕೆ ಬರದೆ ಹೋಗುವುದು ವಿಪರ್ಯಾಸದ ಸಂಗತಿ. ಇದಕ್ಕೆ ಕಾರಣಗಳು ಹಲವಾರು.

* ಈಗಾಗಲೇ ಸರಕಾರಿ ನೌಕರಿ ದೊರೆತಿರುವ ಕಾರಣ ಅಂತಹವರಿಗೆ ಅವಕಾಶವನ್ನು ನಿರಾಕರಿಸಲಾಗುತ್ತದೆ.

*ಮುಂದಿನ ದೊಡ್ಡ ಕ್ರೀಡಾ ಚಟುವಟಿಕೆಗೆ ಸಿದ್ಧತೆ ಮಾಡಿಕೊಳ್ಳುತ್ತಿರುವವರು ಕೂಡ ಈ ಕ್ರೀಡಾಕೂಟದಲ್ಲಿ ಭಾಗವಹಿಸುವುದನ್ನು ನಿರಾಕರಿಸಬಹುದು.

*ಮಾದಕ ವಸ್ತು ಸೇವನೆಯ ಪರೀಕ್ಷೆ. ರಾಷ್ಟ್ರೀಯ

ಮಾದಕ ದ್ರವ್ಯ ಸೇವನೆ ವಿರೋಧಿ ಸಂಸ್ಥೆಯಾದ 'ನ್ಯಾಷನಲ್ ಆಂಟಿ ಡೋಪಿಂಗ್ ಏಜೆನ್ಸಿ'ಯಿಂದ ನಡೆಸಲ್ಪಡುವ ಮಾದಕ ದ್ರವ್ಯ ಸೇವನೆಯ ಪರೀಕ್ಷೆಯ ಭಯದಿಂದ ಕ್ರೀಡಾಕೂಟದಿಂದಲೇ ಹೊರ ನಡೆಯುವುದು.

ಇಲ್ಲಾಗಿದ್ದೂ ಅದೇ. ಎಷ್ಟೋ ಬಾರಿ ಆಹಾರ ಸೇವನೆಯ ವ್ಯತ್ಯಾಸದಿಂದಾಗಿ ಕೂಡ ಹಾರ್ಮೋನುಗಳಲ್ಲಿ ಬದಲಾವಣೆಯನ್ನು ಕಂಡುಕೊಳ್ಳಬಹುದು ಅಥವಾ ವೈದ್ಯರು ಹೇಳಿರುವ ಔಷಧಿಗಳಲ್ಲಿ, ಕೆಲ ನಿಷೇಧಿತ ವಸ್ತುಗಳಲ್ಲಿ ನಾಡಾ ಸಂಸ್ಥೆಯು ಅಂಗೀಕರಿಸದೆ ಇರುವ

ಹಾರ್ಮೋನುಗಳನ್ನು ಹಾಗೂ ದೈಹಿಕ ಬಲವನ್ನು ಪ್ರಚೋದಿಸುವ ಔಷಧಿಗಳನ್ನು ಸೇವಿಸಿದ ಕುರಿತು ಕ್ರೀಡಾಪಟುವಿನ ರಕ್ತ ಮತ್ತು ಮೂತ್ರದ ಸ್ಯಾಂಪಲ್ ಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಅಂತರಾಷ್ಟ್ರೀಯ ಗುಣಮಟ್ಟದ ಪ್ರಯೋಗಾಲಯಗಳಲ್ಲಿ ಪರೀಕ್ಷಿಸಲ್ಪಡುವ ರಕ್ತ ಹಾಗೂ ಮೂತ್ರದ ಮಾದರಿಗಳಲ್ಲಿ ಸಂಸ್ಥೆಯು ನಿಷೇಧಿಸಿರುವ ಯಾವುದಾದರೂ ಒಂದು ಮಾದಕ ದ್ರವ್ಯವನ್ನು ಹೊಂದಿದ್ದರೆ ಆಟಗಾರರನ್ನು ಕೆಲ ತಿಂಗಳು ಇಲ್ಲವೇ ಕೆಲ ವರ್ಷಗಳ ಕಾಲ ಆಟದಿಂದ ಹೊರಗಿಡಬಹುದು. ಕ್ರೀಡೆಯಿಂದಲೇ ನಿಷೇಧಿಸಬಹುದು. ನೋವು ಅಪಮಾನಗಳು ಅವರನ್ನು ಬೆನ್ನಟ್ಟಬಹುದಾದ ಸಾಧ್ಯತೆಗಳು ಬಹಳ.

ಬಹುತೇಕ ಕ್ರೀಡಾಪಟುಗಳು ತಮ್ಮ ದೈಹಿಕ ಸಾಮರ್ಥ್ಯವನ್ನು, ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಕೂಡ ಇಂತಹ ಮಾದಕ ದ್ರವ್ಯಗಳ ಸೇವನೆಯಲ್ಲಿ ತೊಡಗಿಕೊಂಡಿರುತ್ತಾರೆ, ಮತ್ತೆ ಕೆಲವೊಮ್ಮೆ ಬಹು ರಾಷ್ಟ್ರೀಯ ಕಂಪನಿಗಳ ತಯಾರಿಕೆಯ ಆಹಾರ ಪದಾರ್ಥ ಹಾಗೂ ಕೂಲ್ ಡ್ರಿಂಕ್ ಗಳಲ್ಲಿ ಹೆಚ್ಚಿನ ಮಟ್ಟದ ನಿಷೇಧ ಪದಾರ್ಥಗಳು ಇರುವುದು ಇವುಗಳ ಸೇವನೆಯಿಂದಲೂ ಕೂಡ ಕ್ರೀಡಾಪಟುಗಳು ತೊಂದರೆಯನ್ನು ಅನುಭವಿಸುತ್ತಾರೆ. ಎಷ್ಟೋ ಬಾರಿ ಯಾವ ಆಹಾರವನ್ನು ಸೇವಿಸಬೇಕು ಯಾವುದನ್ನು ಸೇವಿಸಬಾರದು ಎಂಬ ಅರಿವಿನ ಕೊರತೆಯಿಂದಲೂ ಇಂತಹ ತೊಂದರೆಗಳು ಉದ್ಭವಿಸುತ್ತವೆ...ಆದ್ದರಿಂದಲೇ ಬಹಳಷ್ಟು ವಿದ್ಯಾರ್ಥಿಗಳು ಈ ಪರೀಕ್ಷೆಯನ್ನು ತಪ್ಪಿಸುವ ಸಲುವಾಗಿ ಕ್ರೀಡೆಯಿಂದಲೇ ಹೊರಗೆ ಉಳಿಯುತ್ತಾರೆ.

ಇಲ್ಲಾದದ್ದು ಕೂಡ ಅದೇ. ಬಹುತೇಕ ರಾಷ್ಟ್ರಮಟ್ಟದ ಅಥ್ಲೆಟಿಕ್ ಕ್ರೀಡಾಕೂಟಗಳಲ್ಲಿ ಮೂರು ಇಲ್ಲವೇ ಅದಕ್ಕಿಂತಲೂ ಹೆಚ್ಚಿನ



ಪ್ರಮಾಣದ ಕ್ರೀಡಾಪಟುಗಳು ಇರಲೇಬೇಕು ಎಂಬುದು ನಿಯಮ.... ಹಾಗಿದ್ದರೆ ಮಾತ್ರ ಅವರಿಗೆ ಸ್ಥಾನಮಾನ ಹಾಗೂ ಪದಕ ಗೆಲ್ಲಲು ಅವಕಾಶ.ಆದರೆ ಖೇಲೋ ಇಂಡಿಯಾದಲ್ಲಿ ಕ್ರೀಡಾಕೂಟದ ಆರಂಭದ ದಿನ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಭಾಗವಹಿಸದೇ ಇರುವುದು ಇದೇ ಕಾರಣಕ್ಕೆ. ಇದೊಂದು ಅಪಾಯಕಾರಿ ಬೆಳವಣಿಗೆ ಅಲ್ಲವೇ?? ಇದೇ ರೀತಿ ಪರಿಸ್ಥಿತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಭಾರತ ದೇಶದಲ್ಲಿ ಕ್ರೀಡೆಗಳಲ್ಲಿ ಭಾಗವಹಿಸುವವರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತದೆ. ಮೌಲ್ಯಗಳೇ ಬದುಕು ಎಂದು ಉಸಿರಾಡುವ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅಜ್ಞಾನ ಮತ್ತು ಅರಿವಿನ ಕೊರತೆಯ ಕಾರಣದಿಂದಾಗಿ ಬಹಳಷ್ಟು ಕ್ರೀಡಾಪಟುಗಳು ತಮ್ಮ ಕ್ರೀಡಾ ಬದುಕಿಗೆ ವಿದಾಯ ಹೇಳಿದ್ದಾರೆ. ಮತ್ತೆ ಕೆಲವರು ಪುಟಿದೆದ್ದ ಚಂಡಿನಂತೆ, ಸುಟ್ಟ ಬೂದಿಯಲ್ಲಿ ಮರು ಹುಟ್ಟು ಪಡೆದುಕೊಳ್ಳುವ ಫೀನಿಕ್ಸ್ ನಂತೆ ಮರಳಿ ಅಂಗಳಕ್ಕೆ ಇಳಿದು ಯಶಸ್ಸು ಕಂಡುಕೊಂಡಿದ್ದಾರೆ.

ಈ ನಿಟ್ಟಿನಲ್ಲಿ ಸರ್ಕಾರ ಗಂಭೀರವಾಗಿ ಯೋಚಿಸಬೇಕಾಗಿದೆ. ಕ್ರೀಡಾಪಟುಗಳಲ್ಲಿ ಕ್ರೀಡೆಗೆ ಅತ್ಯವಶ್ಯಕವಾದ ಶಿಸ್ತು, ಪರಿಶ್ರಮ, ಶ್ರದ್ಧೆ, ಸ್ಥಿರತೆಯ ಜೊತೆ ಜೊತೆಗೆ ಮೌಲ್ಯಗಳನ್ನು ಕೂಡ ಅಭಿವೃದ್ಧಿಪಡಿಸಬೇಕಾದ ಅವಶ್ಯಕತೆಯನ್ನು ಮನಗಂಡು ಅವರಿಗೆ ತರಬೇತಿ ಕೊಡಬೇಕು.

ಜಾಗತಿಕ ಜನಸಂಖ್ಯೆಯಲ್ಲಿ ಎರಡನೇ ಸ್ಥಾನವನ್ನು ಪಡೆದಿದ್ದರೂ ಕೂಡ ಕ್ರೀಡೆಯ ವಿಷಯದಲ್ಲಿ ಪ್ರಪಂಚದ 190ಕ್ಕೂ ಹೆಚ್ಚು ದೇಶಗಳ ಕ್ರೀಡಾಪಟ್ಟಿಯಲ್ಲಿ ಅತ್ಯಂತ ಕೆಳಗಿನ ಸ್ಥಾನವನ್ನು ಗಳಿಸಿರುವ ಭಾರತ ಮುಂದಿನ ದಿನಗಳಲ್ಲಿ ಮತ್ತಷ್ಟು ಶೋಚನೀಯ ಪರಿಸ್ಥಿತಿಗೆ ಇಳಿಯುವುದನ್ನು ತಪ್ಪಿಸಬೇಕು. ಇದು ನಮ್ಮ ಭಾರತ ಘನ ಸರ್ಕಾರದ ಆದ್ಯತೆಯ ಪಟ್ಟಿಯಲ್ಲಿ ಮಂಚೂಣಿಯಲ್ಲಿ ಇರಬೇಕಾದ ವಿಷಯವಾಗಿದ್ದು ಈ ನಿಟ್ಟಿನಲ್ಲಿ ವಿವಿಧ ಕ್ರೀಡಾ ಸಂಸ್ಥೆಗಳು ಹಾಗೂ ಸರ್ಕಾರದ ಯುವಜನ ಮತ್ತು ಕ್ರೀಡಾ ಇಲಾಖೆ ಸಂಯುಕ್ತವಾಗಿ ಯೋಜನೆಗಳನ್ನು ರೂಪಿಸುವ, ಅವುಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಭಾರತದಲ್ಲಿ ಕ್ರೀಡೆಗಳ ಅಭಿವೃದ್ಧಿಗೆ ನಾಂದಿ ಹಾಡಲಿ ಎಂಬ ಆಶಯದೊಂದಿಗೆ

ವೀಣಾ ಹೇಮಂತಗೌಡ ಪಾಟೀಲ್ ಮುಂಡರಗಿ ಗದಗ್

# ವಿದ್ಯಾರ್ಥಿಗಳ ವ್ಯಾಪಾರ ಕೌಶಲ ಅನಾವರಣ



**ಬೀದರ್:ಡಿ.13**–ನಗರದ ನೌಬಾದ್‌ನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ವಾಣಿಜ್ಯ ಉತ್ಸವದಲ್ಲಿ ವಿದ್ಯಾರ್ಥಿಗಳ ವ್ಯಾಪಾರ ಕೌಶಲ ಅನಾವರಣಗೊಂಡಿತು.

ಬಿ.ಕಾಂ. ಹಾಗೂ ಬಿ.ಬಿ.ಎ. ವಿದ್ಯಾರ್ಥಿಗಳು ವಿವಿಧ ವಸ್ತುಗಳ ಮಳಿಗೆಗಳನ್ನು ತೆರೆದು ವ್ಯಾಪಾರ ನಡೆಸಿದರು.

ಫ್ರೂಟ್ ಸಲಾಡ್, ಕರಿದ ತಿನಿಸು, ಸಿಹಿ ತಿನಿಸು, ಪಾನೀಯ, ವಿವಿಧ ಸಾಮಗ್ರಿಗಳು ಮಳಿಗೆಗಳಲ್ಲಿ ಇದ್ದವು. ಇದೇ ವೇಳೆ ಮನೋರಂಜನಾ ಕ್ರೀಡೆಗಳೂ ನಡೆದವು.

ಉತ್ಸವ ಉದ್ಘಾಟಿಸಿದ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಮಹಾಂತಯ್ಯ ಸ್ವಾಮಿ ಮಾತನಾಡಿ, ವಿದ್ಯಾರ್ಥಿಗಳ ಸೃಜನಶೀಲತೆ, ವ್ಯವಹಾರ ಹಾಗೂ ಮಾರ್ಕೆಟಿಂಗ್ ಕೌಶಲ ಅನಾವರಣಕ್ಕೆ ಉತ್ಸವ ಸಹಕಾರಿಯಾಗಿದೆ ಎಂದು ಹೇಳಿದರು.

ಪ್ರಾಚಾರ್ಯ ಶಂಕರ ಅಧ್ಯಕ್ಷತೆ ವಹಿಸಿದ್ದರು. ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಡಾ. ನಾಗರಾಜ ಕುಲಕರ್ಣಿ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಶ್ರೀಕಾಂತ ಪಾಟೀಲ, ವಾಣಿಜ್ಯ ವಿಭಾಗದ ಮುಖ್ಯಸ್ಥೆ ಪ್ರೇಮಲತಾ ಮುನ್ನೋಳಿ, ಉಪನ್ಯಾಸಕಿ ನಗ್ಮಾ ಸೋಹಾ ಮತ್ತಿತರರು ಇದ್ದರು.

# ಏರ್‌ಗನ್ ಅಭ್ಯಾಸದ ವೇಳೆ ಉದ್ಯಮಿಗೆ ತಾಗಿದ ಗುಂಡು ಕಾನೂನು ವಿದ್ಯಾರ್ಥಿ ಬಂಧನ

**ಬೆಂಗಳೂರು, ಡಿ.13**– ಮನೆಯ ಬಾಲ್ಕನಿಯಲ್ಲಿ ಏರ್‌ಗನ್ ಅಭ್ಯಾಸ ಮಾಡುತ್ತಿದ್ದ ವೇಳೆ ಆಕಸಿಕವಾಗಿ ಉದ್ಯಮಿಯೊಬ್ಬರಿಗೆ ತಗುಲಿದ್ದು, ಈ ಸಂಬಂಧ ಕಾನೂನು ವಿದ್ಯಾರ್ಥಿಯನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೃಷ್ಣರಾವ್ ಪಾರ್ಕ್ ಬಳಿಯ ನಿವಾಸಿ ಮೊಹಮದ್ ಅಫ್ಜಲ್ ಬಂಧಿತ ಆರೋಪಿ. ಈತ ನಗರದ ಕಾನೂನು ಕಾಲೇಜೊಂದರಲ್ಲಿ ಅಂತಿಮ ವರ್ಷದ ಎಲ್‌ಎಲ್‌ಬಿ ವ್ಯಾಸಂಗ ಮಾಡುತ್ತಿದ್ದಾನೆ. ಡಿ.10 ರಂದು ರಾತ್ರಿ ಬಾರ್‌ಗಳ ಮಾಲೀಕ ರಾಜಗೋಪಾಲ್ ಎಂಬುವವರು ಎಂದಿನಂತೆ ಸ್ನೆ?ಹಿತರೊಂದಿಗೆ ಕೃಷ್ಣರಾವ್ ಪಾರ್ಕ್‌ನಲ್ಲಿ ವಾಯುವಿಹಾರ ಮಾಡುತ್ತಿದ್ದರು.

ಆ ಸಮಯದಲ್ಲಿ ಪಾರ್ಕ್ ಬಳಿಯ ನಿವಾಸಿ ಅಫ್ಜಲ್ ಏರ್‌ಗನ್ ಅಭ್ಯಾಸ ಮಾಡುತ್ತಿದ್ದಾಗ ಆಕಸಿಕವಾಗಿ ಗುಂಡು ರಾಜಗೋಪಾಲ ಅವರ ಕುತ್ತಿಗೆಗೆ ಹೊಕ್ಕಿ ಗಂಭೀರ ಗಾಯಗೊಂಡಿದ್ದಾರೆ. ತಕ್ಷಣ ಜೊತೆಯಲ್ಲಿದ್ದ ಸ್ನೇಹಿತರು ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆಗೆ ದಾಖಲಿಸಿದ್ದು, ಅದೃಷ್ಟವಶಾತ್ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸುದ್ದಿ ತಿಳಿದು ಬಸವನಗುಡಿ ಠಾಣೆ ಪೊಲೀಸರು ಸ್ಥಳಕ್ಕೆ ದಾವಿಸಿ



ಘಟನಾ ಸ್ಥಳದ ಸುತ್ತಾಮುತ್ತಲಿನಲ್ಲಿರುವ ಸಿಸಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಪಾರ್ಕ್ ಸಮೀಪದ ಮನೆಯಿಂದ ಗುಂಡು ಹಾರಿರುವುದು ಗೊತ್ತಾಗಿದೆ.ಆ ಮನೆಯ ಬಳಿ ಹೋಗಿ ವಿಚಾರಿಸಿದಾಗ, ಕಾನೂನು ವಿದ್ಯಾರ್ಥಿ ಅಫ್ಜಲ್ ಮನೆಯೊಳಗೆ ಏರ್‌ಗನ್‌ನಿಂದ ಶೂಟಿಂಗ್ ಅಭ್ಯಾಸದ ವೇಳೆ ಗುರಿ ತಪ್ಪಿ ಕಿಟಕಿಯಿಂದ ಗುಂಡು ಹೊರ ಹೋಗಿದೆ ಎಂದು ಆತ ಹೇಳಿದ್ದಾನೆ

# ಚಿಲ್ಲರೆ ಹಣದುಬ್ಬರ 0.71%ಕ್ಕೆ ದಾಖಲು

**ನವದೆಹಲಿ, ಡಿ.13:**– ರಾಷ್ಟ್ರೀಯ ಅಂಕಿಅಂಶ ಕಚೇರಿಯ ದತ್ತಾಂಶದ ಪ್ರಕಾರ, ಚಿಲ್ಲರೆ ಹಣದುಬ್ಬರ ಅಥವಾ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ), ನವೆಂಬರ್ 2025 ರಲ್ಲಿ 0.71% ನಲ್ಲಿ ದಾಖಲಾಗಿದೆ. ಇದು ಅಕ್ಟೋಬರ್‌ನಲ್ಲಿ ದಾಖಲೆಯ ಕನಿಷ್ಠವಾದ 0.25% ಗಿಂತ ಹೆಚ್ಚಾಗಿದೆ. ನವೆಂಬರ್‌ನಲ್ಲಿ ಹಣದುಬ್ಬರ ಏರಿಕೆಗೆ ಪ್ರಾಥಮಿಕವಾಗಿ ತರಕಾರಿಗಳು, ಪ್ರೋಟೀನ್–ಭರಿತ ಆಹಾರಗಳು ಮತ್ತು ಇಂಧನದ ಬೆಲೆ ಏರಿಕೆಯೇ ಕಾರಣ ಎಂದು ತಜ್ಞರು ನಂಬುತ್ತಾರೆ. ಅಕ್ಟೋಬರ್‌ನಲ್ಲಿ ಕಡಿಮೆ ಹಣದುಬ್ಬರವು ಜಿಎಸ್ಟಿ ದರಗಳಲ್ಲಿನ ಕಡಿತ ಮತ್ತು ಅನುಕೂಲಕರ ಮೂಲ ಪರಿಣಾಮದಿಂದಾಗಿ ಸಂಭವಿಸಿದೆ.

ಎನ್‌ಎಸ್‌ಓ ದತ್ತಾಂಶದ ಪ್ರಕಾರ, ಆಹಾರ ಹಣದುಬ್ಬರವು ಅಕ್ಟೋಬರ್‌ನಲ್ಲಿ 5.02% ಕ್ಕೆ ಹೋಲಿಸಿದರೆ ನವೆಂಬರ್‌ನಲ್ಲಿ 3.91% ರಷ್ಟು ಕಡಿಮೆಯಾಗಿದೆ. ಇದರರ್ಥ ಆಹಾರ ಪದಾರ್ಥಗಳಲ್ಲಿನ ಹಣದುಬ್ಬರದ ಒತ್ತಡಗಳು ಸ್ವಲ್ಪ ಕಡಿಮೆಯಾಗಿದೆ, ಆದರೆ ತರಕಾರಿಗಳು, ಮೊಟ್ಟೆಗಳು, ಮಾಂಸ, ಮೀನು ಮತ್ತು ಮಸಾಲೆಗಳ ಬೆಲೆಗಳು ಹೆಚ್ಚಾದ ಕಾರಣ ಮೂಲ ಹಣದುಬ್ಬರವು ಹೆಚ್ಚಾಗಿದೆ. ಇಂಧನ ಮತ್ತು ಲಘು ಬೆಲೆಗಳ ಏರಿಕೆಯ ಪರಿಣಾಮವು ಹಣದುಬ್ಬರ ದರದ ಮೇಲೆ ವಿಶೇಷವಾಗಿ ಉಚ್ಚರಿಸಲ್ಪಟ್ಟಿದೆ. ಇಂಧನ ಮತ್ತು ಲಘು ಹಣದುಬ್ಬರವು ನವೆಂಬರ್‌ನಲ್ಲಿ 2.32% ರಷ್ಟಿದ್ದು, ಅಕ್ಟೋಬರ್‌ನಲ್ಲಿ 1.98% ಕ್ಕಿಂತ ಹೆಚ್ಚಾಗಿದೆ.

ತರಕಾರಿಗಳು ಮತ್ತು ಪ್ರೋಟೀನ್ ಭರಿತ ಆಹಾರಗಳ ಬೆಲೆಯಲ್ಲಿನ ಕಾಲೋಚಿತ ಏರಿಳಿತಗಳು ಹಾಗೂ ಜಾಗತಿಕ ತೈಲ ಬೆಲೆಗಳ ಏರಿಕೆಯು ಹಣದುಬ್ಬರದ ಮೇಲೆ ಪರಿಣಾಮ ಬೀರಿದೆ ಎಂದು ತಜ್ಞರು ಹೇಳುತ್ತಾರೆ. ದೇಶೀಯ ಬೇಡಿಕೆ ಮತ್ತು ಪೂರೈಕೆ ಪರಿಸ್ಥಿತಿಗಳು ಸಹ ಹಣದುಬ್ಬರದ ಮೇಲೆ ಪರಿಣಾಮ ಬೀರುತ್ತಿವೆ.

ನವೆಂಬರ್‌ನಲ್ಲಿ ಇಂಧನ ಮತ್ತು ವಿದ್ಯುತ್ ಹಣದುಬ್ಬರವು 2.32% ರಷ್ಟು ಏರಿಕೆಯಾಗಿದೆ. ಇದು ಮುಖ್ಯವಾಗಿ ಪೆಟ್ರೋಲ್, ಡೀಸೆಲ್ ಮತ್ತು ಅನಿಲದ ಬೆಲೆ ಏರಿಕೆಯಿಂದಾಗಿ. ಅಂತರರಾಷ್ಟ್ರೀಯ ತೈಲ ಮತ್ತು ಅನಿಲ ಬೆಲೆಗಳಲ್ಲಿನ ಏರಿಳಿತಗಳು, ದೇಶೀಯ ಬೇಡಿಕೆ ಮತ್ತು ಅಬಕಾರಿ ಸುಂಕಗಳು ಹಣದುಬ್ಬರದ ಮೇಲೆ ನೇರವಾಗಿ ಪರಿಣಾಮ ಬೀರಿವೆ.

ಇಂಧನ ಬೆಲೆ ಏರಿಕೆಯು ಗ್ರಾಹಕರ ವೆಚ್ಚವನ್ನು ಹೆಚ್ಚಿಸುತ್ತದೆ, ಚಿಲ್ಲರೆ ಹಣದುಬ್ಬರದ ಮೇಲೆ ಒತ್ತಡ ಹೇರುತ್ತದೆ ಮತ್ತು ಆರ್ಥಿಕ ಚಟುವಟಿಕೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ತಜ್ಞರು ಹೇಳುತ್ತಾರೆ. ಈ ತಿಂಗಳ ವರದಿಯು ಮುಂಬರುವ ತಿಂಗಳುಗಳಲ್ಲಿ ಇಂಧನ ಮತ್ತು ತರಕಾರಿ ಬೆಲೆಗಳನ್ನು ಮೇಲ್ವಿಚಾರಣೆ ಮಾಡುವುದು ಮುಖ್ಯ ಎಂದು ಸೂಚಿಸುತ್ತದೆ.

ಈ ತಿಂಗಳ ಆರಂಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್.ಬಿ.ಐ) ಪ್ರಸಕ್ತ ಹಣಕಾಸು ವರ್ಷದ ಹಣದುಬ್ಬರದ ಮುನ್ಸೂಚನೆಯನ್ನು 2% ಕ್ಕೆ ಇಳಿಸಿದೆ, ಇದು ಹಿಂದಿನ 2.6% ರಿಂದ ಕಡಿಮೆಯಾಗಿದೆ. ಆರ್ಥಿಕತೆಯು ತ್ವರಿತ ಹಣದುಬ್ಬರವನ್ನು ಅನುಭವಿಸುತ್ತಿದೆ ಎಂದು ಆರ್.ಬಿ.ಐ ಹೇಳಿದೆ. ಕೇಂದ್ರ ಬ್ಯಾಂಕ್ ತನ್ನ ನೀತಿ ಬಡ್ಡಿದರವನ್ನು 25 ಬೇಸಿಸ್ ಪಾಯಿಂಟ್‌ಗಳಿಂದ 5.25% ಕ್ಕೆ ಇಳಿಸಿತು.ಆರ್.ಬಿ.ಐ ಇದನ್ನು ಅಪರೂಪದ "ಗೋಲ್ಡಿಲಾಕ್ಸ್ ಅವಧಿ" ಎಂದು ಬಣ್ಣಿಸಿದೆ, ಇದು ಹೆಚ್ಚಿನ ಬೆಳವಣಿಗೆಯೊಂದಿಗೆ ಕಡಿಮೆ ಹಣದುಬ್ಬರದ ಸಮತೋಲನವಾಗಿದೆ.

ಆರ್.ಬಿ.ಐ ಹಣಕಾಸು ವರ್ಷ26 ಕ್ಕೆ ಜಿಡಿಪಿ ಬೆಳವಣಿಗೆಯನ್ನು 7.3% ಎಂದು ಅಂದಾಜಿಸಿದೆ, ಇದು ಹಿಂದಿನ 6.8% ರಿಂದ ಹೆಚ್ಚಾಗಿದೆ. ಭಾರತೀಯ ಆರ್ಥಿಕತೆಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ 8% ಮತ್ತು ಜೂನ್ ತ್ರೈಮಾಸಿಕದಲ್ಲಿ 7.8% ಬೆಳವಣಿಗೆ ದರಗಳನ್ನು ದಾಖಲಿಸಿದೆ. ಇದು ಹಣದುಬ್ಬರ ನಿಯಂತ್ರಣದಲ್ಲಿದೆ ಮತ್ತು ಆರ್ಥಿಕ ಬೆಳವಣಿಗೆ ಬಲವಾಗಿ ಉಳಿದಿದೆ ಎಂದು ಸೂಚಿಸುತ್ತದೆ ಎಂದು ತಜ್ಞರು ನಂಬುತ್ತಾರೆ.



ಹಣದುಬ್ಬರ ದರ ಏರಿಕೆಯು ಹೂಡಿಕೆದಾರರು ಮತ್ತು ಗ್ರಾಹಕರಿಗೆ ಇಬ್ಬರಿಗೂ ಪ್ರಮುಖ ಸಂಕೇತಗಳನ್ನು ಒದಗಿಸುತ್ತದೆ. ಗ್ರಾಹಕರು ತಮ್ಮ ಖರ್ಚುಗಳನ್ನು ಯೋಜಿಸುವಾಗ ತರಕಾರಿಗಳು, ಪ್ರೋಟೀನ್–ಭರಿತ ಆಹಾರಗಳು ಮತ್ತು ಇಂಧನದ ಬೆಲೆ ಏರಿಕೆಯನ್ನು ಪರಿಗಣಿಸಬೇಕು. ಹಣದುಬ್ಬರ–ಉದ್ದೇಶಿತ ಹೂಡಿಕೆಗಳು ಮತ್ತು ಸರ್ಕಾರಿ ಬಾಂಕ್‌ಗಳು ದೀರ್ಘಾವಧಿಯ ಹೂಡಿಕೆಗಳು ಸುರಕ್ಷಿತವಾಗಿರಬಹುದು ಎಂಬುದರ ಸಂಕೇತವಾಗಿಯೂ ಹೂಡಿಕೆದಾರರು ಇದನ್ನು ನೋಡಬಹುದು.

# ವಾರಕ್ಕೆರಡು ದಿನ ನೀರು ಪೂರೈಸುವ ಭರವಸೆ ಮರೆತ ಶಾಸಕ ಬಿ ಆರ್ ಪಾಟೀಲ



ಯುವಮಾರ್ಗ ಸುದ್ದಿ

**ಆಳಂದ,ಡಿ.13–** ಅಮರ್ಜಾ ಆಣೆಕಟ್ಟಿನಲ್ಲಿ ಸಮರ್ಪಕ ನೀರು ಇದ್ದರೂ ಆಳಂದ ಪಟ್ಟಣಕ್ಕೆ ನೀರು ಪೂರೈಸುವಲ್ಲಿ ತಾಲೂಕು ಆಡಳಿತ ಸಂಪೂರ್ಣವಾಗಿ ವಿಫಲವಾಗಿದೆ ಇದರ ಹೊಣೆಯನ್ನು ಶಾಸಕ ಬಿ ಆರ್ ಪಾಟೀಲ ಹೊರಬೇಕು ಎಂದು ಮಾಜಿ ಶಾಸಕ ಸುಭಾಷ ಆರ್ ಗುತ್ತೇದಾರ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಸ್ತುತ ಆಳಂದ ಪಟ್ಟಣದಲ್ಲಿ 15 ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. ಇದರಿಂದ ಸಾರ್ವಜನಿಕರಿಗೆ ತುಂಬಾ ಕಷ್ಟವಾಗುತ್ತಿದೆ. ಸಮರ್ಪಕ ನೀರು ಪೂರೈಕೆ ಇಲ್ಲದೇ ನಾಗರಿಕರು ಹಿಡಿಶಾಪ ಹಾಕುತ್ತಿದ್ದಾರೆ. ಸ್ಥಳೀಯ ಆಡಳಿತ ಕೂಡಲೇ ಎಚ್ಚೆತ್ತುಕೊಂಡು ವ್ಯವಸ್ಥಿತವಾಗಿ ನೀರು ಪೂರೈಕೆಗೆ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಈ ಹಿಂದೆ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಶಾಸಕ ಬಿ ಆರ್ ಪಾಟೀಲ ವಾರಕ್ಕೆ ಕನಿಷ್ಠ 2 ಬಾರಿಯಾದರೂ ನೀರು ಪೂರೈಸುವ ವಾಗ್ದಾನ ನೀಡಿದ್ದರು ಆದರೆ ಆ ಮಾತು ಈಗ ಅವರಿಗೆ ನೆನಪಿಸುವ ಅವಶ್ಯಕತೆ ಬಂದಿದೆ ಎಂದು ತಿಳಿಸಿದ್ದಾರೆ.

ಪುರಸಭೆ ಮುಖ್ಯಾಧಿಕಾರಿಗಳು ಕಚೇರಿಗೆ ಬರುತ್ತಿಲ್ಲ. ಉಳಿದ ಅಧಿಕಾರಿಗಳಿಗೆ ಕರೆ ಮಾಡಿದರೇ ಫೋನ್ ಕರೆ ಸ್ವೀಕರಿಸುತ್ತಿಲ್ಲ. ಪುರಸಭೆ ಆಡಳಿತ ಸಂಪೂರ್ಣ ಹದಗೆಟ್ಟು ಹೋಗಿದೆ. ಸಾರ್ವಜನಿಕರ ಯಾವ ಕೆಲಸವೂ ಆಗುತ್ತಿಲ್ಲ ಇದರಿಂದ ಜನ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದಿದ್ದಾರೆ.

ಕುಡಿಯಲು, ಬಳಸಲು ನೀರಿಲ್ಲದೇ ಜನ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಇದರ ಅರಿವಿಲ್ಲದೇ ಶಾಸಕರು ಜನರ ಗಮನ ಬೇರೆಡೆ ಸೆಳೆಯಲು ಇಲ್ಲದ ಸಲ್ಲದ ವಿಚಾರಗಳನ್ನು ಪ್ರಸ್ತಾಪಿಸಿ ಕಾಲಹರಣ ಮಾಡುತ್ತಿದ್ದಾರೆ. ಕೂಡಲೇ ಜನರ ಆದ್ಯತೆಯ ವಿಷಯಗಳ ಮೇಲೆ ಗಮನಹರಿಸಿ ನೀರು ಪೂರೈಕೆಗೆ ತ್ವರಿತ ಕ್ರಮಕೈಗೊಳ್ಳಲಿ ಎಂದು ಆಗ್ರಹಿಸಿದ್ದಾರೆ.

# ಪುನರ್ವಸತಿ ಕಾರ್ಯಕರ್ತರ ಗೌರವಧನ ಕನಿಷ್ಠ ವೇತನ ಕಾಯ್ದೆ ವ್ಯಾಪ್ತಿಗೆ



**ಬೆಳಗಾವಿ,ಡಿ.13–** ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು, ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು, ನಗರ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ಕನಿಷ್ಠ ವೇತನ ಕಾಯ್ದೆಯಡಿ ತರುವ ಪ್ರಸ್ತಾವನೆಯನ್ನು ಕಾರ್ಮಿಕ ಇಲಾಖೆ ಅಭಿಪ್ರಾಯ ಪಡೆಯಲು ಸಲ್ಲಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಯಕರ ಸಬಲೀಕರಣ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ವಿಧಾನಸಭೆಗೆ ತಿಳಿಸಿದ್ದಾರೆ.

ಶಾಸಕ ಎಸ್.ಸುರೇಶ್‌ಕುಮಾರ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿರುವ ಸಚಿವರು, ಗ್ರಾಮೀಣ ಪುನರ್ವಸತಿ ಯೋಜನೆಯಡಿ ತಾಲ್ಲೂಕು ಪಂಚಾಯ್ತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 176 ವಿವಿದ್ದೊದ್ದೇಶ ಕಾರ್ಯಕರ್ತರಿಗೆ 16 ಸಾವಿರ ರೂ. ಗೌರವಧನ ನೀಡಲಾಗುತ್ತಿದೆ ಎಂದಿದ್ದಾರೆ.

6,022 ಗ್ರಾಮಪಂಚಾಯ್ತಿಗಳಲ್ಲಿನ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಿಗೆ 10 ಸಾವಿರ ರೂ. ಹಾಗೂ 613 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಗರ ಪುರ್ನವಸತಿ ಕಾರ್ಯಕರ್ತರಿಗೆ 10 ಸಾವಿರ ರೂ. ಗೌರವಧನ ನೀಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

## ನಾಳೆ ವಿಜಯಕಿಶೋರ್ ಪುಣ್ಯಸ್ಮರಣೆ



**ಬಳ್ಳಾರಿ, ಡಿ.13–** ನಗರದ ರಾಘವಕಲಾ ಮಂದಿರದಲ್ಲಿ ನಾಳೆ ಸಂಜೆ 4 ಗಂಟೆಗೆ ಹಿಂದುಸ್ಥಾನಿ ಗಾಯಕಿ , ಸುಗಮ ಸಂಗೀತ ವಿದುಷಿ ವಿಜಯಕಿಶೋರ್ ಅವರ ನಾಲ್ಕನೇ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಅವರ ಶಿಷ್ಯ ಬಳಗ ಹಮ್ಮಿಕೊಂಡಿದೆ.

ಕಾರ್ಯಕ್ರಮದ ಅಂಗವಾಗಿ ಶಿಷ್ಯ ಬಳಗದಿಂದ ಹಾಡುಗಾರಿಕೆ ಮತ್ತು ರಾಯಚೂರಿನ ವರದೇಂದ್ರ ಗಂಗಾಖೆಡ ಅವರಿಂದ ಗಾಯನ ಕಾರ್ಯಕ್ರಮ ನಡೆಯಲಿದೆಂದು ಹಿರಿಯ ಪತ್ರಕರ್ತ ಎಂ.ಅಹಿರಾಜ್ ತಿಳಿಸಿದ್ದಾರೆ.

# ಸಂಘಟನೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿ ಸಂಘಟನೆಯನ್ನು ಗಟ್ಟಿಗೊಳಿಸಲು ಪ್ರಯತ್ನಿಸಿ: ಬಸವರಾಜ

ಯುವಮಾರ್ಗ ಸುದ್ದಿ

**ಮಸ್ಕಿ,ಡಿ.13–** ಪಟ್ಟಣದ ಸರ್ಕ್ಯೂಟ್ ಹೌಸ್ ನಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರವಾದ ಸಂಘಟನೆ ವತಿಯಿಂದ ತಾಲೂಕ ಮಟ್ಟದ ಸದಸ್ಯತ್ವ ನೊಂದಣಿ ಅಭಿಯಾನಕ್ಕೆ ತಾಲೂಕು ಪ್ರಧಾನ ಸಂಚಾಲಕ ಬಸವರಾಜ್ ಕೊಠಾರಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ನಮ್ಮ ಸಂಘಟನೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಲು ಸಂಘಟನೆಯನ್ನು ಗಟ್ಟಿಗೊಳಿಸಲು ತಾಲೂಕಿನಲ್ಲಿ ಹೆಚ್ಚು ಹೆಚ್ಚು ಜನರು ಸದಸ್ಯತ್ವ ನೋಂದಣಿ ಮಾಡಿಕೊಳ್ಳಬೇಕೆಂದು ತಿಳಿಸಿದರು ಅದೇ ರೀತಿಯಾಗಿ ಮುಂದಿನ ದಿನಮಾನಗಳಲ್ಲಿ ಮಸ್ಕಿ ತಾಲೂಕಿನಲ್ಲಿ ಮಹಿಳೆಯರು ಯುವಕರು ಸದಸ್ಯತ್ವ ನೊಂದಣಿ ಮಾಡಿಕೊಳ್ಳಲು ಮುಂದೆ ಬರಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮಸ್ಕಿ ತಾಲೂಕಿನ ಮಹಿಳಾ ಪ್ರಧಾನ ತಾಲೂಕ ಸಂಘಟನೆ ಪ್ರಧಾನ ಸಂಚಾಲಕರಾಗಿ



ಸುಮಿತ್ರ ಸಾಗರ ಕ್ಯಾಂಪ್ ಇವರನ್ನು ಆಯ್ಕೆ ಮಾಡಲಾಯಿತು ಮಹಿಳೆಯರು ಹೆಚ್ಚು ಹೆಚ್ಚು ಸದಸ್ಯತ್ವ ನೋಂದಣಿ ಮಾಡಬೇಕೆಂದು ತಿಳಿಸಲಾಯಿತು ಕಾರ್ಯಕ್ರಮದಲ್ಲಿ ಕಲ್ಬುರ್ಗಿ ವಿಭಾಗಿ ಸಂಚಾಲಕರಾದ ಚನ್ನಪ್ಪ ಹೆಡಿಗಿಬಾಳ, ನಾಗಪ್ಪ ದಿನಸಮುದ್ರ, ಪರಶುರಾಮ್ ಹುಸ್ಕಿಹಾಳ್, ಹುಲಿಗೇಶ್ ಮುರಾರಿ, ಚಂದಪ್ಪ ಹಾಲಾಪುರ್, ಅರುಣ್ ಕುಮಾರ್ ಸಾಗರ್ ಕ್ಯಾಂಪ್, ಸೋಮಣ್ಣ ಮೇಟಿ, ರಾಮಣ್ಣ ಮಸ್ಕಿ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು

# ಲೈಂಗಿಕ ಸೋಂಕಿನಿಂದ ಹರಡುವ ಸಿಫಿಲಿಸ್ ನಿರ್ಲಕ್ಷಿಸಿದರೆ ಅಪಾಯಕಾರಿಯಾಗಬಲ್ಲದು: ಡಾ.ಮಹಮ್ಮದ್ ಶಾಕೀರ್

ಯುವಮಾರ್ಗ ಸುದ್ದಿ



**ರಾಯಚೂರು,ಡಿ.13–**ಕಣ್ಣಿಗೆ ಕಾಣದ ಸುರುಳಿಯಾಕಾರದ ಬ್ಯಾಕ್ಟೀರಿಯಂ ಟ್ರೆಪೋನೆಮಾ ಪ್ಯಾಲಿಡಮ್‌ನಿಂದ ಹರಡುವ ಇದು ಸಿಫಿಲಿಸ್ ಸೋಂಕು ಹುಣ್ಣಿನ ರೂಪದಲ್ಲಿ ಇದ್ದು ಅಸುರಕ್ಷಿತ, ಅಪರಿಚಿತರೊಂದಿಗಿನ ಲೈಂಗಿಕ ಸಂಪರ್ಕದಿಂದ ಒಬ್ಬರಿಂದ ಒಬ್ಬರಿಗೆ ಹರುಡುವ ಸಾಧ್ಯತೆಯಿದ್ದು ಈ ದಿಶೆಯಲ್ಲಿ ವೈಯಕ್ತಿಕ ಕಾಳಜಿ ಅತ್ಯಂತ ಪ್ರಮುಖವಾಗಿದೆ ಎಂದು ಜಿಲ್ಲಾ ಡ್ಯಾಪ್ಕೂ ಹಾಗೂ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ ಮಹಮ್ಮದ್ ಶಾಕೀರ್ ಮೊಹಿಯುದ್ದಿನ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಮೂಲಕ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಹೆಚ್‌ಐವಿ ಏಡ್ಸ್ ಯುವ ಜನೋತ್ಸವ ಅಡಿಯಲ್ಲಿ ಗರ್ಭಿಣಿ ತಾಯಂದಿರಿಗೆ ವಿಶೇಷ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡುತ್ತಾ, ಸಾಮಾನ್ಯವಾಗಿ ಲೈಂಗಿಕ ರೋಗಗಳು ಯಾರದೋ ತಪ್ಪಿಗೆ ಇನ್ನೊಬ್ಬರಿಗೆ ಶಿಕ್ಷೆಯ ರೂಪದಲ್ಲಿ ಬರುತ್ತವೆ, ಅದರಲ್ಲೂ ಹೆಚ್‌ಐವಿ, ಸಿಫಿಲಿಸ್ ಪ್ರಮುಖವಾಗಿವೆ.

ದೈಹಿಕ ಸಂಪರ್ಕದ ಸಮಯದಲ್ಲಿ ಸಿಫಿಲಿಟಿಕ್ ಹುಣ್ಣು ವಿನೊಂದಿಗೆ ನೇರ ಸಂಪರ್ಕದ ಮೂಲಕ ಹರಡುವುದಲ್ಲದೆ, ಸೋಂಕಿಗೆ ಒಳಗಾದಾಗ ಗರ್ಭಾವಸ್ಥೆಯಲ್ಲಿ ಸೋಂಕಿತ ತಾಯಿಯಿಂದ ಅವಳ ಮಗುವಿಗೆ ಸಹ ಹರಡಬಹುದು ಅದರಲ್ಲೂ ಹುಟ್ಟುವ ಮಗು ಸಹ ಜನ್ಮಜಾತ ಸಿಫಿಲಿಸ್‌ಗೆ ಕಾರಣವಾಗ ಬಹುದಾಗಿದೆ.

ಮತ್ತು ಸಾಂಕ್ರಾಮಿಕ ಸೋಂಕು ರಕ್ತ ಮತ್ತು ದುಗ್ಧರಸದಿಂದ ದೇಹದಾದ್ಯಂತ ಹರಡಿ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಕಾರಣ ಜನನಾಂಗಗಳಲ್ಲಿ ದೀರ್ಘಕಾಲ ಹುಣ್ಣುಗಳು ಇದ್ದಲ್ಲಿ ನಿರ್ಲಕ್ಷಿಸದೆ ತಪ್ಪದೆ ತಜ್ಞ ವೈದ್ಯರಿಂದ ಸಲಹೆ, ಅಗತ್ಯವಿದ್ದಲ್ಲಿ ಚಿಕಿತ್ಸೆ ಪಡೆದು ಸ್ವಾಸ್ಥ ಸಮಾಜ ನಿರ್ಮಿಸಲು ವಿನಂತಿಸಿದರು.

ಈ ಸಂದರ್ಭದಲ್ಲಿ ಮಕ್ಕಳ ತಜ್ಞರಾದ ಡಾ ಅನುಷಾ, ಜಿಲ್ಲಾ ಡ್ಯಾಪ್ಕೊ ಮೇಲ್ವಿಚಾರಕರ ಮಲ್ಲಯ್ಯ ಮಠಪತಿ ಮಾತನಾಡಿದರು.

ರೆಡಿಯಾಲಜಿಸ್ಟ್ ಡಾ ಭುವನೇಶ್ವರಿ,ಪ್ರಸೂತಿ ತಜ್ಞೆ ಡಾ ಪವಿತ್ರಾ ಪಾಟೀಲ್, ವೈದ್ಯಾಧಿಕಾರಿ ಡಾ ರಾಕೇಶ್,ಡಾ ಸುನೀತಾ,ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಹಿರಿಯ ಶುಶ್ರೂಷಣಾಧಿಕಾರಿ ಸಲೋಮಿ, ಡ್ಯಾಪ್ಕೊ ವಿಭಾಗದ ಪುಷ್ಪಲತಾ,ಸಿಮಾಲತಾ, ಶಾಂತಕುಮಾರ, ರಾಮಚಂದ್ರ, ಸೇರಿದಂತೆ ತಾಯಂದಿರು ಹಾಗೂ ಇತರರು ಉಪಸ್ಥಿತರಿದ್ದರು.

# ಸಿಂಧನೂರು ಶ್ರೀಕಾಳಿಕಾದೇವಿ ದೇವಸ್ಥಾನ ಶಂಕುಸ್ಥಾಪನೆ ಕಾರ್ಯಕ್ರಮ

ಯುವಮಾರ್ಗ ಸುದ್ದಿ

**ಸಿಂಧನೂರು,ಡಿ.13–**ನಗರದ ಬಡೀಬೇಸ್ ಕಾಲೋನಿಯ ಪುರಾತನ ಕಾಲದ ಶ್ರೀಕಾಳಿಕಾದೇವಿ ದೇವಸ್ಥಾನವನ್ನು ಜೀರ್ಣದ್ದಾರ ಕಾರ್ಯ ಕೈಗೊಳ್ಳಲು ಸಿಂಧನೂರು ತಾಲೂಕ ವಿಶ್ವಕರ್ಮ ಸಮಾಜದ ವತಿಯಿಂದ ಶ್ರೀ ವೇ ಮೂ ನಾಗಲಿಂಗಚಾರ್ಯ ಬೇವಿನಹಾಳ ಇವರ ಪುರೋಹಿತ್ಯದಲ್ಲಿ ಹೋಮ– ಹವನ ಕಾರ್ಯಕ್ರಮ,ತಾಯಿ ಶ್ರೀ ಕಾಳಿಕಾದೇವಿ ಮೂರ್ತಿ ಸ್ಥಾನ ಪಲ್ಲಟ ಹಾಗೂ ಭೂಮಿ ಶಂಕು ಸ್ಥಾಪನೆ ಕಾರ್ಯಕ್ರಮ ಅತ್ಯಂತ ಅಚ್ಚುಕಟ್ಟಾಗಿ ತರ್ಕಬದ್ಧವಾಗಿ ವಿಜೃಂಭಣೆಯಿಂದ ಜರುಗಿತು.ಬೆಳಗ್ಗೆ ಶ್ರೀ ಕಾಳಿಕಾದೇವಿಗೆ ವಿಶೇಷ ಪೂಜೆ,ಹೋಮ–ಹವನ ಕಾರ್ಯಕ್ರಮ ನೆರವೇರಿತು.ಇದೇವೇಳೆ ಭಕ್ತಾಧಿಗಳು ತಮ್ಮ ಇಷ್ಟಾರ್ಥ ಸಿದ್ದಿಗಳು ಈಡೇರಲೆಂದು ದೇವಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು. ನಂತರ ಮಹಾಪ್ರಸಾದ ನೆರವೇರಿತು.

ಈ ಸಂಧರ್ಭದಲ್ಲಿ ಶ್ರೀ ವೆಂಕಟೇಶ್ವರ ಮಹಾಸ್ವಾಮಿಗಳು ಏಕದಂಡಗಿ ಮಠ ಶಾಡಲಗೇರಿ,ಅಯ್ಯಪ್ಪ ಟಿ ನಿವೃತ್ತ ಃಇಔ ಹಿರಿಯ ಮುಖಂಡರು,ಸೋಮಣ್ಣ ಪತ್ತಾರ ಸುಕಲಪೇಟೆ ರಾಜ್ಯ ಕಾರ್ಯದರ್ಶಿಗಳು,ಅ.ಕ.ವಿ.ಮ.ಸಭೆ ಬೆಂಗಳೂರು.ವೀರೇಶ ದೇವರಗುಡಿ ಮುಖಂಡರು.ಮೌನೇಶ ತಿಡಿಗೋಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ತಾ.ವಿ.ಸಿಂಧನೂರು.ಮಂಜುನಾಥ ಕೊಟ್ನೆಕಲ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಶ್ರೀ ಕಾಳಿಕಾದೇವಿ ದೇವಸ್ಥಾನ ಟ್ರಸ್ಟ್ ಸಿಂಧನೂರು. ರವೀಂದ್ರ ಗದ್ರಟಗಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ತಾಲೂಕ ಕರ್ಪೆಂಟರ್ ಕ್ಷೇಮಾಭಿವೃದ್ಧಿ ಸಂಘ ಸಿಂಧನೂರು. ಮಂಕು ಸತ್ಯನಾರಾಯಣ ಅಧ್ಯಕ್ಷರು ವೀರಬ್ರಹ್ಮೇಂದ್ರಸ್ವಾಮಿ ದೇವಸ್ಥಾನ ಸೇವಾ ಸಮಿತಿ,ಶಂಕ್ರಪ್ಪ ಸಾಹುಕಾರ ನಿಡಿಗೋಳ ಗೌರವ ಅಧ್ಯಕ್ಷರು,

ಸಿದ್ರಾಮಪ್ಪ ಇರಿ ಹೊಸಳ್ಳಿ, ವೀರಭದ್ರಪ್ಪ ಹಂಚಿನಾಳ ಮಾಜಿ ಅಧ್ಯಕ್ಷರು,ಷಣ್ಮುಖಪ್ಪ ಪತ್ತಾರ ಉಪಾಧ್ಯಕ್ಷರು,ಅಂಬಣ್ಣ ಪತ್ತಾರ ಗೊರೇಬಾಳ ಉಪಾಧ್ಯಕ್ಷರು,ತಿರುಮಲ ಆಚಾರ್ಯ ಗೆಜ್ಜೆಳ್ಳಿ ಉಪಾಧ್ಯಕ್ಷರು,ಸದಾಶಿವ ಬಡಿಗೇರ ಉಪಾಧ್ಯಕ್ಷರು,ಧರ್ಮಣ್ಣ ಪತ್ತಾರ ಗುಂಜಳ್ಳಿ ಪ್ರಧಾನ ಕಾರ್ಯದರ್ಶಿಗಳು,ಬಸವರಾಜ ಕಮತಗಿ ಕಾರ್ಯದರ್ಶಿಗಳು,ಮೌನೇಶ ಪ್ರಿನ್ಸ್ ಕಾರ್ಯದಶಿರ್ಗಳು,ಚನ್ನಪ್ಪ ಕೆ.ಹೊಸಹಳ್ಳಿ ಸಂಘಟನಾ ಕಾರ್ಯದರ್ಶಿಗಳು,ಮುತ್ತಣ್ಣ ಪತ್ತಾರ ಸಂಘಟನಾ ಕಾರ್ಯದಶಿರ್ಗಳು,ವಿಜಯ್ ಚಂದ್ರ ಆಚಾರ ಗೌರವಾಧ್ಯಕ್ಷರು,ವಿನೋದ



ಕುಮಾರ ಕಾರ್ಯದರ್ಶಿಗಳು ಮೌನೇಶ ಪೈಂಟರ್, ಶ್ರೀ ಶಿವಾಚಾರ್ಯ ಅರ್ಚಕರು ವೇದಮೂರ್ತಿ ಶ್ರೀ ವೀರಬ್ರಹ್ಮೇಂದ್ರ ಸ್ವಾಮಿ ದೇವಸ್ಥಾನ.ಡಾ.ವೀರೇಶ ಬಡಿಗೇರ,ಶಶಿಕಾಂತ ಮುದಗಲ್, ಶಿರಸಪ್ಪ ಕಂಬಾರ ಜಾಲಿಹಾಳ, ಪಂಪಣ್ಣ ಕಂಬಾರ ಜಾಲಿಹಾಳ, ಕಾಶೀಪತಿ ಜವಳಗೇರಾ,ಗುರುಮೂರ್ತಿ ಕಾಂಚಗಾರ ತುರವಿಹಾಳ,ಮರಿಸ್ವಾಮಿ ಕಾಂಚಗಾರ ತುರವಿಹಾಳ ಅಧ್ಯಕ್ಷರು, ಮಾನಪ್ಪ ವಾಸ್ತು ಅಲಬಾನೂರು,ದೇವರಾಜ ಉಪ್ಪಳ,ಬಸವರಾಜ ಮುಕ್ಕುಂದಾ,ಶರಣಪ್ಪ ಸೋಮಲಾಪುರ, ಗಂಗಾಧರ ಪೆಂಟರ್, ವೀರೇಂದ್ರ ಸಾಲಗುಂದ,ಚಿದಾನಂದ ಬಡಿಗೇರ ಗೊರೇಬಾಳ, ಗಣೇಶ ಪತ್ತಾರ ಸುಕಲಪೇಟೆ,ಶಂಕರ್ ಆಚಾರಿ ಸಿಂಧನೂರು, ನರಸಿಂಹ ಎಲೆಕೂಡ್ಲಿಗಿ, ಶ್ರವಣ ಕುಮಾರ,ಪ್ರಕಾಶ ಮುಳ್ಳೂರು, ಈರಣ್ಣ ಕೋಟೆ,ಸಣ್ಣ ವೀರೇಶ ಪತ್ತಾರ ಸುಕಲಪೇಟೆ, ಶಂಕರ್ ಪತ್ತಾರ ಗುಂಜಳ್ಳಿ, ರಾಜು ಪತ್ತಾರ ಬಳಗಾನೂರು, ನಾಗರಾಜ ಗೊರೇಬಾಳ,ಮರಿಸ್ವಾಮಿ ಬಡಿಗೇರ,ಪಂಪಣ್ಣ ಪತ್ತಾರ ಕಲಮಂಗಿ, ಮೌನೇಶ ಶರಣಬಸವ ಗುಂಜಳ್ಳಿ,ಪ್ರಸನ್ನ ಪತ್ತಾರ ಸುಕಲಪೇಟೆ, ಮನು ಪೆಂಟರ್ ಸಾಲಗುಂದ,ರವಿಕುಮಾರ ಬೋರಮಳ,ಅಶೋಕ ಬಾದರ್ಲಿ,ಕಿರಣ್ ಪತ್ತಾರ ಎಲೆಕೂಡ್ಲಿಗಿ,ವೀರಭದ್ರ ಪತ್ತಾರ ಅಲಬನೂರು,ಮೌನೇಶ ಉಪ್ಪಲದೊಡ್ಡಿ,ಶಾಶ್ವತ ಕುರುಕುಂದ, ಮಂಜುನಾಥ ಉಪ್ಪಲದೊಡ್ಡಿ,ವೀರೇಶ ದಡೆಸೂಗೂರು,ನರಸಪ್ಪ ಪೂಜಾರಿ,ಚಿನ್ನಪ್ಪ ಯಚ್ಚರಪ್ಪ ಬಿಜಕಲ್ಲ,ಮೌನೇಶ ಭಾಗ್ಯಪ್ಪ ಪತ್ತಾರ, ಅಂಬಣ್ಣ ತುರವಿಹಾಳ,ವೀರೇಶ ತುರವಿಹಾಳ ಇದ್ದರು.

# ಕತ್ತರಿಯಿಂದ ತಿವಿದು ಪತ್ನಿ ಕೊಂದ ಪತಿ



**ತೇರದಾಳ,ಡಿ.13–** ಪತಿಯೊಬ್ಬ ತನ್ನ ಪತ್ನಿಯನ್ನು ಕತ್ತರಿಯಿಂದ ಚುಚ್ಚಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಬಾಗಲಕೋಟೆ ಜಿಲ್ಲೆಯ ತೇರದಾಳ ಪಟ್ಟಣದಲ್ಲಿ ಗುರುವಾರ ರಾತ್ರಿ ನಡೆದಿದೆ.

ಕೊಲೆಯಾದ ಮಹಿಳೆಯನ್ನು ಲಕ್ಷ್ಮೀ ಭರತೇಶ ಮಹೇಶವಾಡಗಿ (28) ಎಂದು ಗುರ್ತಿಸಲಾಗಿದೆ.

ಪತಿ ಭರತೇಶ ಮಹೇಶವಾಡಗಿ ಕೊಲೆ ಮಾಡಿದ ಆರೋಪಿ ಎಂದು ಎಸ್ಪಿ ಸಿದ್ದಾರ್ಥ ಗೋಯಲ್ ತಿಳಿಸಿದ್ದಾರೆ.

ಆರೋಪಿತನಾದ ಭರತೇಶ ಪಾರೀಸ್ ಮಹೇಶವಾಡಗಿ ಈತನು ಅನೈತಿಕ ಸಂಬಂಧ ಹೊಂದಿದ್ದು ಅಲ್ಲದೇ ಈತನ ತಾಯಿಯಾದ ಪದ್ಮಾವತಿ ಗಂಡ ಪಾರೀಸ್ ಮಹೇಶವಾಡಗಿ ಇವರಿಬ್ಬರೂ ಕೂಡಿ ಕೊಲೆಯಾದ ಮಹಿಳೆಗೆ ವರದಕ್ಷಿಣೆ ಕಿರುಕುಳ ನೀಡಿ ವರದಕ್ಷಿಣೆ ಹಣ ಪಡೆದುಕೊಂಡಿದ್ದರು. ಅಲ್ಲದೇ ತಾಯಿಯ ಪ್ರಚೋದನೆಯಿಂದ ಹೆಂಡತಿ ಲಕ್ಷ್ಮೀಯನ್ನು ಡಿ.10 ರಂದು ರಾತ್ರಿ ಪಟ್ಟಣದ ಗುಮ್ಮಟ ಗಲ್ಲಿಯಲ್ಲಿರುವ ತನ್ನ ಮನೆಯ ಪಡಸಾಲೆಯಲ್ಲಿ ಮಲಗಿದ್ದಾಗ ಅವಳೊಂದಿಗೆ ಜಗಳಾ ತೆಗೆದು ಕೊಲೆ ಮಾಡುವ ಉದ್ದೇಶದಿಂದ ಕತ್ತರಿಯಿಂದ ಕುತ್ತಿಗೆ ಮತ್ತು ಎದೆಗೆ ಚುಚ್ಚಿ ಕೊಲೆ ಮಾಡಿದ್ದಾನೆ ಮತ್ತು ಈ ತನತಾಯಿ ಪದ್ಮಾವತಿ ಗಂಡ ಪಾರೀಸ ಮಹೇಶವಾಡಗಿ ಪ್ರಚೋದನೆ ನೀಡಿ ಕೊಲೆ ಮಾಡಸಿದ್ದಾಳೆ ಎಂದು ಮೃತಳ ತಾಯಿ ತೆರದಾಳ ಪೊ?ಲಿಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ಸ್ಥಳಕ್ಕೆ ಎಸ್ಪಿ ಸಿದ್ದಾರ್ಥ ಗೋಯಲ್, ಡಿವಾಯ್.ಎಸ್.ಪಿ ಸಯ್ಯದ ರೋಷನ್ ಜಮೀರ್, ಪಿ.ಎಸ್.ಐ ಎಸ್.ಕೆ ಸಿಂಗನ್ನವರ್ ಅವರ ಪೊಲೀಸ್ ತಂಡ ಭೇಟಿ ನೀಡಿ ಪರಿಶೀಲಿಸಿ ತನಿಖೆ ನಡೆಸಿದ್ದಾರೆ.

# ಕೃತಕ ಬುದ್ಧಿಮತ್ತೆಯ ಸಲಹೆ ಜೊತೆ ತಾಂತ್ರಿಕ ನೈಪುಣ್ಯತೆ ಬೆಳಸಿಕೊಳ್ಳಲು ಕರೆ



**ಬಳ್ಳಾರಿ, ಡಿ.13–** ಕೃತಕ ಬುದ್ಧಿಮತ್ತೆ ನೀಡುವ ಸಲಹೆಗಳೊಂದಿಗೆ ತಾಂತ್ರಿಕ ನೈಪುಣ್ಯತೆಯನ್ನು ಹೆಚ್ಚಿಸಿಕೊಂಡು ಸ್ಪರ್ಧಾತ್ಮಕ ಬದುಕಿನಲ್ಲಿ ವಿದ್ಯಾರ್ಥಿಗಳು ಯಶಸ್ವಿಯಾಗಬೇಕು ಎಂದು

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯವಸ್ಥಾಪನ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಸುನೀಲಕುಮಾರ್ ಅಭಿಪ್ರಾಯಪಟ್ಟರು.

ಅವರು ನಗರದ ಸರಳಾದೇವಿ ಕಾಲೇಜಿನಲ್ಲಿ ವ್ಯವಹಾರಿಕ ಅಧ್ಯಯನ ವಿಭಾಗದಿಂದ ಆಯೋಜಿಸಿದ್ದ ' ವ್ಯವಸ್ಥಾಪಕರಿಗೆ ವ್ಯಾಪಾರ ವಿಶ್ಲೇಷಣೆಯ ಪ್ರಾಮುಖ್ಯತೆ 'ರೂಸಾ ಅನುದಾನಿತ ವಿದ್ಯಾರ್ಥಿ ಅಭಿವೃದ್ಧಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಂಪನ್ಮೂಲ ವ್ಯಕ್ತಿ ಡಾ.ಕೆ.ದಿನೇಶ್ ಹಣಕಾಸು ವಿಶ್ಲೇಷಣೆಯ ಬಗೆಗೆ, ಕವಿತಾ ಅಚ್ಚೊಳ್ಳಿ ಮಾನವ ಸಂಪನ್ಮೂಲ ವಿಶ್ಲೇಷಣೆಯ ಬಗೆಗೆ ಮಾತನಾಡಿದರು

ಅಧ್ಯಕ್ಷತೆ ವಹಿಸಿದ್ದಕಾಲೇಜಿನ ಪ್ರಾಂಶುಪಾಲ ಡಾ. ಜಿ. ಪ್ರಹ್ಲಾದ್ ಚೌದ್ರಿ ಇಂದಿನ ದತ್ತಾಂಶ ಆಧಾರಿತ ಉದ್ಯೋಗ ಮಾರುಕಟ್ಟೆಯಲ್ಲಿ ವಿಶ್ಲೇಷಣಾತ್ಮಕ ಕೌಶಲ್ಯಗಳ ಅಭಿವೃದ್ಧಿಯು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆಂದರು.

ವೇದಿಕೆಯ ಮೇಲೆ ರೂಸಾ ಸಂಯೋಜಕ ಡಾ.ಕುಂಚಂ ನರಸಿಂಹಲು, ವ್ಯವಸ್ಥಾಪನ ವಿಭಾಗದ ಮುಖ್ಯಸ್ಥ ಡಾ.ಪಲ್ಲವಿ, ಸಹ ಪ್ರಾಧ್ಯಾಪಕರಾದ ಡಾ.ಸಲಿಹಾ,ಚನ್ನಮ್ಮ ಕಣವಿ ಇದ್ದರು

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111,
9743496111

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H